ದ್ರೋಣಾಚಾರ್ಯ ಅಕಾಡೆಮಿ – ಬೆಂಗಳೂರು

ಪ್ರಚಲಿತ ಘಟನೆಗಳು – 2024

2024 ನವೆಂಬರ್ 5 ರಂದು ದ್ರೋಣಾಚಾರ್ಯ ಅಕಾಡೆಮಿಯಲ್ಲಿ (ಆನ್‌ಲೈನ್ ಪರೀಕ್ಷೆ) ನಡೆದ 75 ಅಂಕಗಳ ಪ್ರಚಲಿತ ಘಟನೆಗಳ ಪ್ರಶ್ನೆಗಳು ಮತ್ತು ಉತ್ತರಗಳು

1. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಯಾರು ನೇಮಕವಾಗಿದ್ದಾರೆ ?

ಎ) ಮನೋಜ್ ಸೋನಿ

ಬಿ) ಪ್ರೀತಿ ಸೂದನ್

ಸಿ) ಮನೋಜ್ ಶರ್ಮಾ

ಡಿ) ಅಪೂರ್ವ ಚಂದ್ರ

ಉತ್ತರ : ಬಿ) ಪ್ರೀತಿ ಸೂದನ್

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

ವಿವರಣೆ –

ಕೇಂದ್ರ ಸರ್ಕಾರದ ಆರೋಗ್ಯ ಸಚಿವಾಲಯದ ಮಾಜಿ ಕಾರ್ಯದರ್ಶಿ ಪ್ರೀತಿ ಸೂದನ್‌ರವರನ್ನು ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷೆಯನ್ನಾಗಿ ನೇಮಕ ಮಾಡಲಾಗಿದೆ. ಕೇಂದ್ರ ಲೋಕಸೇವಾ ಆಯೋಗದ ಸದಸ್ಯೆಯಾಗಿರುವ **ಪ್ರೀತಿ ಸೂದನ್‌ರವರು 2024 ಆಗಸ್ಟ್ 1 ರಂದು** ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡರು. **ಆಂಧ್ರಪ್ರದೇಶ ರಾಜ್ಯದ ಕೇಡರ್‌ನ 1983ರ ಬ್ಯಾಚ್‌ನ** ಐಎಎಸ್‌ನ ಅಧಿಕಾರಿಯಾಗಿರುವ ಪ್ರೀತಿ ಸೂದನ್‌ರವರು ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. **2024 ಆಗಸ್ಟ್ 1 ರಿಂದ ಮುಂದಿನ ಆದೇಶದವರೆಗೆ ಅಥವಾ 2025ರ ಏಪ್ರಿಲ್ 29ರವರೆಗೆ ಪ್ರೀತಿ ಸೂದನ್‌ರವರು ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಾರೆ.** ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿದ್ದ ಮನೋಜ್ ಸೋನಿರವರು ವೈಯಕ್ತಿಕ ಕಾರಣ ನೀಡಿ 2024 ಜುಲೈ 4 ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ಆ ಸ್ಥಾನ ತೆರವಾಗಿತ್ತು.

2. ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ ಯಾರು ನೇಮಕವಾಗಿದ್ದಾರೆ ?

ಎ) ಶೇಖ್ ಹಸೀನಾ

ಬಿ) ಮೊಹಮ್ಮದ್ ಯೂನಸ್

ಸಿ) ಮೊಹಮ್ಮದ್ ಶಹಾಬುದ್ದೀನ್

ಡಿ) ಶೇಖ್ ಮುಜಿಬುರ್ ರೆಹಮಾನ್

ಉತ್ತರ : ಬಿ) ಮೊಹಮ್ಮದ್ ಯೂನಸ್

ವಿವರಣೆ –

2006ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಆರ್ಥಿಕ ತಜ್ಞ ಮೊಹಮ್ಮದ್ ಯೂನಸ್‌ರವರನ್ನು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರನ್ನಾಗಿ 2024 ಆಗಸ್ಟ್ 8ರಂದು ಬಾಂಗ್ಲಾದೇಶದ ಅಧ್ಯಕ್ಷರಾದ ಮೊಹಮ್ಮದ್ ಶಹಾಬುದ್ದೀನ್‌ರವರು ನೇಮಕ ಮಾಡಿದ್ದಾರೆ. ಮೊಹಮ್ಮದ್ ಯೂನಸ್‌ರವರು "ಕಿರುಸಾಲ" ಯೋಜನೆಯ ಹರಿಕಾರರು ಇವರು ಬಡವರಿಗಾಗಿ ಜಾರಿಗೆ ತಂದಿದ್ದ ಗ್ರಾಮೀಣ ಬ್ಯಾಂಕ್ ಚಳುವಳಿ ಭಾರಿ ಯಶಸ್ಸು ಕಂಡಿತ್ತು. ಇದಕ್ಕಾಗಿ ಮೊಹಮ್ಮದ್ ಯೂನಸ್‌ರವರಿಗೆ 2006ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ದೊರಕಿದೆ.
ಮೊಹಮ್ಮದ್ ಯೂನಸ್‌ರವರು 2007ರಲ್ಲಿ 'ಸಿಟಿಜನ್ ಪವರ್' ಎಂಬ ಪಕ್ಷವನ್ನು ಸ್ಥಾಪಿಸಿದ್ದರು.

ಕರ್ನಾಟಕ ಬಜೆಟ್ 2024–25ರ ತರಗತಿಗಳು – **Santhosh H R Sir**

https://dhronacharyaacademy.com/courses/sbv/

ಸಾಮಾನ್ಯ ಅರ್ಥಶಾಸ್ತ್ರ – 8, 9, 10 ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮ ಆಧಾರಿತ 50 ಘಂಟೆಗಳ ಸಂಪೂರ್ಣ ತರಗತಿಗಳು **Mohammed Taslim Sir**

https://dhronacharyaacademy.com/general-economics-1/

ಸಾಮಾನ್ಯ ಅಧ್ಯಯನ ತರಗತಿಗಳು – **ANAND SIR GK**

https://dhronacharyaacademy.com/general-knowledge/

ಇಂಗ್ಲೀಷ್ ತರಗತಿಗಳು – **K. Kattimani SIR**

https://dhronacharyaacademy.com/english/

3. 2024 ಆಗಸ್ಟ್ 30 ರಂದು ಕೇಂದ್ರ ಸಂಪುಟದ 33ನೇ ಕಾರ್ಯದರ್ಶಿಯಾಗಿ ಯಾರು ಅಧಿಕಾರ ಸ್ವೀಕರಿಸಿದರು ?

ಎ) ಟಿ.ವಿ ಸೋಮನಾಥನ್ ಬಿ) ರಾಜೀವ್ ಕುಮಾರ್

ಸಿ) ರಾಜೀವ್ ಗೌಬಾ ಡಿ) ಪಿ ಹರೀಶ್

ಉತ್ತರ : ಎ) ಟಿ.ವಿ ಸೋಮನಾಥನ್

ವಿವರಣೆ –

2024 ಆಗಸ್ಟ್ 30 ರಂದು ಕೇಂದ್ರ ಸಂಪುಟದ 33ನೇ ಕಾರ್ಯದರ್ಶಿಯಾಗಿ ಟಿ.ವಿ ಸೋಮನಾಥನ್‌ರವರು ಅಧಿಕಾರ ಸ್ವೀಕರಿಸಿದರು. **ಇವರು ತಮಿಳುನಾಡು ಖೇಡರ್‌ನ 1987ನೇ ಸಾಲಿನ ಐಎಎಸ್ ಅಧಿಕಾರಿ.** (ಟಿ.ವಿ ಸೋಮನಾಥನ್‌ರವರು ಕೇಂದ್ರ ಸಂಪುಟ ಕಾರ್ಯದರ್ಶಿ ಆಗುವುದಕ್ಕಿಂತ ಮುಂಚೆ ಕೇಂದ್ರದ ಹಣಕಾಸು ಕಾರ್ಯದರ್ಶಿ ಆಗಿದ್ದರು)

4. ಈ ಕೆಳಕಂಡ ಯಾವ ಜೋಡಣೆ ಸರಿಯಾಗಿದೆ ?

ಎ) ಕೇಂದ್ರ ಸಂಪುಟದ ಕಾರ್ಯದರ್ಶಿ – ಟಿ.ವಿ ಸೋಮನಾಥನ್

ಬಿ) ರೈಲ್ವೆ ಮಂಡಳಿಯ ಅಧ್ಯಕ್ಷ ಹಾಗೂ ಸಿಇಒ – ಸತೀಶ್ ಕುಮಾರ್

ಸಿ) ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು – ಪ್ರೀತಿ ಸೂದನ್

ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

ಉತ್ತರ : ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

5. 2024ರ ಸಿನ್ಸಿನಾಟಿ ಓಪನ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಪಡೆದವರು ಯಾರು ?

ಎ) ಅಮೆರಿಕದ ಫ್ರಾನ್ಸಿಸ್ ಟಿಯಾಫೊ
ಬಿ) ಇಟಲಿಯ ಜೆನ್ನಿಕ್ ಸಿನ್ನರ್
ಸಿ) ಸರ್ಬಿಯದ ನೋವಾಕ್ ಜೋಕೊವಿಕ್
ಡಿ) ಸ್ಪೇನ್ ದೇಶದ ರಫೆಲ್ ನಡಾಲ್
ಉತ್ತರ : ಬಿ) ಇಟಲಿಯ ಜೆನ್ನಿಕ್ ಸಿನ್ನರ್

ವಿವರಣೆ –
ಇಟಲಿಯ ಜೆನ್ನಿಕ್ ಸಿನ್ನರ್ ಮತ್ತು ಬೆಲಾರಸ್‌ನ ಅರಿನಾ ಸಬಲೆಂಕಾರವರು 2024 ಆಗಸ್ಟ್ 20ರಂದು ನಡೆದ ಸಿನ್ಸಿನಾಟಿ ಓಪನ್ ಎಟಿಪಿ ಮಾಸ್ಟರ್ ಟ್ರೋಫಿ ಟೆನಿಸ್ ಟೂರ್ನಿಯಲ್ಲಿ ಅನುಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

6. 2024ರ ಆಗಸ್ಟ್ 6ರಂದು ಫಿಜಿಯ ಅತ್ಯುನ್ನತ ನಾಗರಿಕ ಪುರಸ್ಕಾರ "ಕಂಪ್ಯಾನಿಯನ್ ಆಫ್ ದ ಆರ್ಡರ್ ಆಫ್ ಫಿಜಿ" ಗೌರವ ಪಡೆದವರು ಯಾರು ?

ಎ) ರಾಷ್ಟ್ರಪತಿ ದ್ರೌಪದಿ ಮುರ್ಮು

ಬಿ) ಉಪರಾಷ್ಟ್ರಪತಿ ಜಗದೀಪ್ ಧನಕರ್

ಸಿ) ಪ್ರಧಾನಿ ನರೇಂದ್ರ ಮೋದಿ

ಡಿ) ವಿದೇಶಾಂಗ ಸಚಿವ ಎಸ್ ಜೈಶಂಕರ್

ಉತ್ತರ: ಎ) ರಾಷ್ಟ್ರಪತಿ ದ್ರೌಪದಿ ಮುರ್ಮು

ವಿವರಣೆ –

“ಕಂಪ್ಯಾನಿಯನ್ ಆಫ್ ದ ಆರ್ಡರ್ ಆಫ್ ಫಿಜಿ” ಪುರಸ್ಕಾರ ಫಿಜಿ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರವಾಗಿದೆ. 2024 ಆಗಸ್ಟ್ 6 ರಂದು ಫಿಜಿ ದೇಶದ ಅಧ್ಯಕ್ಷರಾದ ರತು ವಿಲಿಯಂ ಮೈವಿಲ್ಲಿ ಕಟೋನಿವಿರೆರವರು ಭಾರತದ ರಾಷ್ಟ್ರಪತಿ ದೌಪದಿ ಮುರ್ಮುರವರಿಗೆ ಫಿಜಿ ದೇಶದ ಅತ್ಯುನ್ನತ ನಾಗರಿಕ ಗೌರವವಾದ **“ಕಂಪ್ಯಾನಿಯನ್ ಆಫ್ ದ ಆರ್ಡರ್ ಆಫ್ ಫಿಜಿ”** ಗೌರವವನ್ನು ಪ್ರಧಾನ ಮಾಡಿದರು.

ಫಿಜಿ ದೇಶದ ರಾಜಧಾನಿ – **ಸುವ**

ಫಿಜಿ ದೇಶದ ಅಧ್ಯಕ್ಷರು – **ರತು ವಿಲಿಯಂ ಮೈವಿಲ್ಲಿ ಕಟೋನಿವಿರೆ**

ಫಿಜಿ ದೇಶದ ಪ್ರಧಾನ ಮಂತ್ರಿ – **ಸಿತಿವೇನಿ ರಬುಕಾ**

7. 2024ರಲ್ಲಿ ಕೇಂದ್ರ ಸರ್ಕಾರವು ಚೊಚ್ಚಲ "ವಿಜ್ಞಾನ ರತ್ನ" ಪ್ರಶಸ್ತಿಗೆ ಯಾರನ್ನು ಆಯ್ಕೆ ಮಾಡಿದೆ ?

ಎ) ಅನ್ನಪೂರ್ಣ ಸುಬ್ರಮಣ್ಯಂ

ಬಿ) ಜಿ. ಪದ್ಮನಾಭನ್

ಸಿ) ಎಸ್ ಸೋಮನಾಥ್

ಡಿ) ಕೆ.ಶಿವನ್

ಉತ್ತರ : ಬಿ) ಜಿ. ಪದ್ಮನಾಭನ್

ವಿವರಣೆ –

ಪ್ರಸಿದ್ಧ ಜೀವರಸಾಯನ ವಿಜ್ಞಾನಿ, ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಜಿ. ಪದ್ಮನಾಭನ್‌ರವರನ್ನು ಕೇಂದ್ರ ಸರ್ಕಾರವು ಚೊಚ್ಚಲ **"ವಿಜ್ಞಾನ ರತ್ನ"** ಪ್ರಶಸ್ತಿಗೆ ಆಯ್ಕೆ ಮಾಡಿದೆ. ಜಿ. ಪದ್ಮನಾಭನ್‌ರವರು ಮಲೇರಿಯಾಕ್ಕೆ ಸಂಬಂಧಿಸಿದಂತೆ ನಡೆಸಿದ ಸಂಶೋಧನೆಯಿಂದ ಪ್ರಸಿದ್ಧಿಗಳಿಸಿದ್ದಾರೆ. ಇವರು ಪದ್ಮಭೂಷಣ, ಪದ್ಮಶ್ರೀ ಪ್ರಶಸ್ತಿಗಳನ್ನು ಸಹ ಪಡೆದಿದ್ದಾರೆ.

ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಕೇಂದ್ರ ಸರ್ಕಾರ ಪ್ರತಿ ವರ್ಷ ನೀಡುವ 33 ರಾಷ್ಟ್ರೀಯ ವಿಜ್ಞಾನ ಪುರಸ್ಕಾರಗಳಲ್ಲಿ ವಿಜ್ಞಾನ ರತ್ನ ಪ್ರಶಸ್ತಿಯು ಒಂದು. ವಿಜ್ಞಾನ ರತ್ನ ಪ್ರಶಸ್ತಿ ಅಲ್ಲದೇ ಈ ಬಾರಿ 13 "ವಿಜ್ಞಾನ ಶ್ರೀ" ಮತ್ತು 18 "ವಿಜ್ಞಾನ ಯುವ" ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. "ವಿಜ್ಞಾನ ಶ್ರೀ" ಪಡೆದ 13 ಮಂದಿಯಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆ್ಯಸ್ಟ್ರೋಫಿಸಿಕ್ಸ್‌ನ ನಿರ್ದೇಶಕರಾದ ಅನ್ನಪೂರ್ಣಿ ಸುಬ್ರಮಣ್ಯಂ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಉಮೇಶ್ ವಾಷ್ಣೇಯ್‌ರವರು ಸೇರಿದ್ದಾರೆ.

ಇಸ್ರೋದ ಚಂದ್ರಯಾನ –3 ತಂಡಕ್ಕೆ "ಟೀಂ ವಿಜ್ಞಾನ" ಪ್ರಶಸ್ತಿ ನೀಡಲಾಗಿದೆ.

8. ಈ ಕೆಳಕಂಡ ಯಾವ ಜೋಡಣೆ ಸರಿಯಾಗಿದೆ ?

ಎ) 2024ನೇ ಸಾಲಿನ ಡಿ.ದೇವರಾಜ ಅರಸು ಪ್ರಶಸ್ತಿಯನ್ನು ಎಸ್.ಕೆ ಕಾಂತಾ ರವರಿಗೆ ನೀಡಲಾಗಿದೆ.

ಬಿ) 70ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ರಿಷಭ್ ಶೆಟ್ಟಿರವರನ್ನು ಆಯ್ಕೆಮಾಡಲಾಗಿದೆ.

ಸಿ) ಭಾರತದಿಂದ ಮೊದಲ ಬಾರಿಗೆ ಅಂಜೂರ ಹಣ್ಣಿನ ರಸವನ್ನು ಪೋಲೆಂಡ್‌ಗೆ ರಫ್ತು ಮಾಡಲು ನಿರ್ಧರಿಸಲಾಗಿದೆ.

ಡಿ) ಮೇಲಿನ ಎಲ್ಲವೂ ಸರಿಯಾಗಿದೆ.

ಉತ್ತರ : ಡಿ) ಮೇಲಿನ ಎಲ್ಲವೂ ಸರಿಯಾಗಿದೆ.

9. ಯಾಮಿನಿ ಕೃಷ್ಣಮೂರ್ತಿ ಇವರು....

ಎ) ಭರತನಾಟ್ಯ ಮತ್ತು ಕೂಚುಪುಡಿಯ ಕಲಾವಿದರು

ಬಿ) ಪಿಟೀಲು ವಾದಕರು

ಸಿ) ಯಕ್ಷಗಾನ ಕಲಾವಿದರು

ಡಿ) ತಬಲ ವಾದಕರು

ಉತ್ತರ : ಎ) ಭರತನಾಟ್ಯ ಮತ್ತು ಕೂಚುಪುಡಿಯ ಕಲಾವಿದರು

ವಿವರಣೆ – ಭರತನಾಟ್ಯ ಮತ್ತು ಕೂಚುಪುಡಿಯ ಹೆಸರಾಂತ ನೃತ್ಯ ಕಲಾವಿದೆ ಯಾಮಿನಿ ಕೃಷ್ಣಮೂರ್ತಿರವರು 2024 ಆಗಸ್ಟ್ 3 ರಂದು ನಿಧನರಾದರು. ಆಂಧ್ರಪ್ರದೇಶ ರಾಜ್ಯದ ಚಿತ್ತೂರು ಜಿಲ್ಲೆಯ ಮದನಪಲ್ಲಿಯಲ್ಲಿ 1940 ಡಿಸೆಂಬರ್ 20 ರಂದು ಜನಿಸಿದ್ದರು. ಯಾಮಿನಿ ಕೃಷ್ಣಮೂರ್ತಿರವರಿಗೆ 1968ರಲ್ಲಿ ಪದ್ಮಶ್ರಿ, 2001ರಲ್ಲಿ ಪದ್ಮಭೂಷಣ, 2016ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳು ದೊರಕಿವೆ (1977ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗೆ ಇವರು ಭಾಜನರಾಗಿದ್ದರು)

Hussainappa Nayaka Sir

ಅಕ್ಟೋಬರ್ ತಿಂಗಳ ಪ್ರಚಲಿತ ಘಟನೆಗಳ ತರಗತಿಗಳು

https://www.youtube.com/live/ReWHw3lFtb4?si=mgxw8zoihHilQQFI

https://www.youtube.com/live/1loZdXo3cnk?si=ol40tiIDG4SVB7JU

https://www.youtube.com/live/kBgh36bS_Xs?si=yMU5Q1FTN2_B246U

https://www.youtube.com/live/iio2T-G3RY4?si=AMHRcC8tn6UADv2o

https://www.youtube.com/live/0btxO7kC50E?si=84fFgXUKZAiL-6ue

https://www.youtube.com/live/1lCw4ld4gzM?si=Hqowp8eoNa7xiPhp

10. ಭಾರತದ ಅಗ್ನಿ ಕ್ಷಿಪಣಿಗಳ ಪಿತಾಮಹ ಯಾರು ?

ಎ) ಆರ್.ಎನ್ ಅಗರ್ವಾಲ್

ಬಿ) ಡಾ॥ ಎಪಿಜೆ ಅಬ್ದುಲ್ ಕಲಾಂ

ಸಿ) ಟೆಸ್ಸಿ ಥಾಮಸ್

ಡಿ) ರಾಜಾ ರಾಮಣ್ಣ

ಉತ್ತರ : ಎ) ಆರ್.ಎನ್ ಅಗರ್ವಾಲ್

ವಿವರಣೆ –

2024 ಆಗಸ್ಟ್ 15ರಂದು ಅಗ್ನಿ ಕ್ಷಿಪಣಿ ಪಿತಾಮಹ, 1990ರಲ್ಲಿ ಪದ್ಮಶ್ರೀ, 2000ರಲ್ಲಿ ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತರಾಗಿದ್ದ ಆರ್.ಎನ್ ಅಗರ್ವಾಲ್ ನಿಧನರಾದರು.

ಅಗ್ನಿ ಸರಣಿಯ ಕ್ಷಿಪಣಿಗಳನ್ನು ತಯಾರಿಸುವಲ್ಲಿ ಆರ್.ಎನ್ ಅಗರ್ವಾಲ್‌ರವರು ಪ್ರಮುಖ ಪಾತ್ರ ವಹಿಸಿದ್ದರು.

11. ಅವನಿ ಲೇಖರಾ, ಮೋನಾ ಅಗರ್‌ವಾಲ್, ಮನೀಷ್ ನರ್ವಾಲ್ ಇವರು ಯಾವ ಆಟಕ್ಕೆ ಹೆಸರುವಾಸಿ ?

ಎ) ಟೇಬಲ್ ಟೆನ್ನಿಸ್

ಬಿ) ಬ್ಯಾಡ್ಮಿಂಟನ್

ಸಿ) ಟೆನ್ನಿಸ್

ಡಿ) ಶೂಟಿಂಗ್

ಉತ್ತರ : ಡಿ) ಶೂಟಿಂಗ್

ವಿವರಣೆ –

ಪ್ಯಾರಿಸ್‌ನಲ್ಲಿ ನಡೆದ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಅವನಿ ಲೇಖರಾರವರು ಮಹಿಳೆಯರ ಶೂಟಿಂಗ್ 10 ಮೀಟರ್ ಏರ್‌ರೈಫಲ್(ಎಸ್‌ಎಚ್1) ವಿಭಾಗದಲ್ಲಿ 249.7 ಅಂಕಗಳನ್ನು ಪಡೆಯುವುದರ ಮೂಲಕ ಚಿನ್ನದ ಪದಕ, ಭಾರತದ ಮನೀಷ್ ನರ್ವಾಲ್‌ರವರು ಪುರುಷರ ಶೂಟಿಂಗ್ 10 ಮೀಟರ್ ಏರ್‌ರೈಫಲ್(ಎಸ್‌ಎಚ್1) ವಿಭಾಗದಲ್ಲಿ 234.9 ಅಂಕಗಳನ್ನು ಪಡೆಯುವುದರ ಮೂಲಕ ಬೆಳ್ಳಿಯ ಪದಕ ಮತ್ತು ಭಾರತದ ಮೋನಾ ಅಗರವಾಲ್‌ರವರು ಮಹಿಳೆಯರ ಶೂಟಿಂಗ್ 10 ಮೀಟರ್ ಏರ್‌ರೈಫಲ್(ಎಸ್‌ಎಚ್1) ವಿಭಾಗದಲ್ಲಿ 228.7 ಅಂಕಗಳನ್ನು ಪಡೆಯುವುದರ ಮೂಲಕ ಕಂಚಿನ ಪದಕ ಪಡೆದಿದ್ದಾರೆ.

12. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹೊಸ ಅಧ್ಯಕ್ಷರಾಗಿ ಯಾರು ನೇಮಕವಾಗಿದ್ದಾರೆ ?

ಎ) ಚಲ್ಲಾ–ಶ್ರೀನಿವಾಸುಲು ಸೆಟ್ಟಿ (ಸಿ.ಎಸ್ ಸೆಟ್ಟಿ)

ಬಿ) ದಿನೇಶ್ ಕುಮಾರ್ ಖಾರಾ

ಸಿ) ಭಾನು ಪ್ರತಾಪ್ ಶರ್ಮಾ

ಡಿ) ಅರುಂಧತಿ ಭಟ್ಟಾಚಾರ್ಯ

ಉತ್ತರ : ಎ) ಚಲ್ಲಾ–ಶ್ರೀನಿವಾಸುಲು ಸೆಟ್ಟಿ (ಸಿ.ಎಸ್ ಸೆಟ್ಟಿ)

ವಿವರಣೆ – ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ನೂತನ ಅಧ್ಯಕ್ಷರಾಗಿ ಚೆಲ್ಲಾ ಶ್ರೀನಿವಾಸುಲು ಸೆಟ್ಟಿ (ಸಿ.ಎಸ್ ಸೆಟ್ಟಿ) ನೇಮಕವಾಗಿದ್ದಾರೆ. (ಇವರು ಎಸ್‌ಬಿಐನ 27ನೇ ಅಧ್ಯಕ್ಷರು). **ಎಸ್‌ಬಿಐ ಬ್ಯಾಂಕಿನ ಅಧ್ಯಕ್ಷ ಸ್ಥಾನದ ಗರಿಷ್ಠ ವಯೋಮಿತಿ 63 ವರ್ಷಗಳು. 2024 ಆಗಸ್ಟ್ 28ರಂದು ಎಸ್‌ಬಿಐ ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ದಿನೇಶ್ ಕುಮಾರ್ ಖಾರಾರವರು ಸೇವೆಯಿಂದ ನಿವೃತ್ತಿಯಾದರು.** ಹಾಗಾಗಿ, ಹಣಕಾಸು ಸೇವಾ ಸಂಸ್ಥೆಗಳ ಬ್ಯೂರೊದಿಂದ (ಎಫ್‌ಎಸ್‌ಐಬಿ) ಚೆಲ್ಲಾ ಶ್ರೀನಿವಾಸುಲು ಸೆಟ್ಟಿ (ಸಿ.ಎಸ್ ಸೆಟ್ಟಿ) ಅವರನ್ನು ಆಯ್ಕೆ ಮಾಡಿದೆ.

ಎಸ್‌ಬಿಐ ಬ್ಯಾಂಕ್‌ನ ಅಧ್ಯಕ್ಷರ ಆಯ್ಕೆ ಹೇಗೆ ?

ಎಸ್‌ಬಿಐ ಬ್ಯಾಂಕಿನ ಹಿರಿಯ ವ್ಯವಸ್ಥಾಪಕ ನಿರ್ದೇಶಕರ ಪೈಕಿಯೇ ಒಬ್ಬರನ್ನು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡುವುದು ವಾಡಿಕೆಯಾಗಿದೆ.

ಎಫ್‌ಎಸ್‌ಐಬಿಯು ಒಬ್ಬರ ಹೆಸರನ್ನು ಪ್ರಧಾನಿ ನೇತೃತ್ವದ ಸಂಪುಟ ನೇಮಕಾತಿ ಸಮಿತಿಗೆ ಶಿಫಾರಸು ಮಾಡುತ್ತದೆ. ಅಂತಿಮವಾಗಿ ಈ ಸಮಿತಿಯು ಆಯ್ಕೆಗೆ ಮುದ್ರೆ ಒತ್ತುತ್ತದೆ.

ಎಫ್‌ಎಸ್‌ಐಬಿನ ಅಧ್ಯಕ್ಷರು – ಭಾನು ಪ್ರತಾಪ್ ಶರ್ಮಾ

FSIB-Financial Services Institutions Bureau

ಎಫ್‌ಎಸ್‌ಐಬಿನ ಮೊದಲ ಹೆಸರು – **Banks Board Bureau (BBB)**

ವಿಶೇಷವಾಗಿ ಗಮನಿಸಿ –

ಭಾರತದ ಸಾರ್ವಜನಿಕ ವಲಯದ ಅತಿ ದೊಡ್ಡ ಬ್ಯಾಂಕ್ – ಎಸ್‌ಬಿಐ

ಎಸ್‌ಬಿಐ ಬ್ಯಾಂಕ್‌ನ ಕೇಂದ್ರ ಕಚೇರಿ – ಮುಂಬೈ (ಮಹಾರಾಷ್ಟ್ರ ರಾಜ್ಯ)

1955 ಏಪ್ರಿಲ್ 30 ರಂದು ಇಂಪಿರಿಯಲ್ ಬ್ಯಾಂಕ್ ಆಫ್ ಇಂಡಿಯಾವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ಮರುನಾಮಕರಣ ಮಾಡಲಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೊದಲ ಮಹಿಳಾ ಅಧ್ಯಕ್ಷರು – ಅರುಂಧತಿ ಭಟ್ಟಾಚಾರ್ಯ (2013 ರಿಂದ 2017)

ಕರ್ನಾಟಕ ಬಜೆಟ್ 2024–25ರ ತರಗತಿಗಳು – **Santhosh H R Sir**

https://dhronacharyaacademy.com/courses/sbv/

ಸಾಮಾನ್ಯ ಅರ್ಥಶಾಸ್ತ್ರ – 8, 9, 10 ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮ ಆಧಾರಿತ 50 ಘಂಟೆಗಳ ಸಂಪೂರ್ಣ ತರಗತಿಗಳು **Mohammed Taslim Sir**

https://dhronacharyaacademy.com/general-economics-1/

ಸಾಮಾನ್ಯ ಅಧ್ಯಯನ ತರಗತಿಗಳು – **ANAND SIR GK**

https://dhronacharyaacademy.com/general-knowledge/

ಇಂಗ್ಲೀಷ್ ತರಗತಿಗಳು – **K. Kattimani SIR**

https://dhronacharyaacademy.com/english/

13. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) ಎಸ್‌ಬಿಐ ಬ್ಯಾಂಕಿನ ಅಧ್ಯಕ್ಷರು – ಸಿ.ಎಸ್.ಸೆಟ್ಟಿ

ಬಿ) ಅಂದಾಜು ಸಮಿತಿಯ ಅಧ್ಯಕ್ಷರು – ಡಾ॥ ಸಂಜಯ್ ಜೈಸ್ವಾಲ್

ಸಿ) ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ(ಪಿಎಸಿ) ಅಧ್ಯಕ್ಷರು – ಕೆ.ಸಿ ವೇಣುಗೋಪಾಲ್

ಡಿ) ಜಾರಿ ನಿರ್ದೇಶನಾಲಯದ ನಿರ್ದೇಶಕರು – ರಾಕೇಶ್ ಕುಮಾರ್

ಉತ್ತರ : ಡಿ) ಜಾರಿ ನಿರ್ದೇಶನಾಲಯದ ನಿರ್ದೇಶಕರು – ರಾಕೇಶ್ ಕುಮಾರ್

ವಿವರಣೆ –

ED - Enforcement Directorate

ಸ್ಥಾಪನೆಯಾದ ವರ್ಷ – **1956 ಮೇ 1**

ಇದರ ಕೇಂದ್ರ ಕಚೇರಿ ಇರುವುದು – **ನವದೆಹಲಿ**

ಇದು ಕೇಂದ್ರದ ಕಂದಾಯ ಇಲಾಖೆ ಮತ್ತು ಹಣಕಾಸು ಸಚಿವಾಲಯದ ಅಧೀನದಲ್ಲಿದೆ.

ಜಾರಿ ನಿರ್ದೇಶನಾಲಯದ ಹಂಗಾಮಿ ನಿರ್ದೇಶಕರಾಗಿದ್ದ 1993ರ ಭಾರತೀಯ ಕಂದಾಯ ಇಲಾಖೆಯ ಆದಾಯ ತೆರಿಗೆ ಕೇಡರ್‌ನ ಅಧಿಕಾರಿ **ರಾಹುಲ್ ನವೀನ್‌ರವರನ್ನು ಪೂರ್ಣಪ್ರಮಾಣದ ನಿರ್ದೇಶಕರನ್ನಾಗಿ** ಕೇಂದ್ರ ಸರ್ಕಾರ ನೇಮಕ ಮಾಡಿದೆ.

14. ಪರಿಣಾಮಕಾರಿಯಾಗಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಜಾರಿ ಮತ್ತು ಪಾರದರ್ಶಕತೆ ಕಾಯ್ದುಕೊಳ್ಳುವುದು, ನೈಸರ್ಗಿಕ ಕೃಷಿಗೆ ಉತ್ತೇಜನ ನೀಡುವುದಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಯ ಮುಖ್ಯಸ್ಥರು ಯಾರು ?

ಎ) ಶಿವರಾಜ್ ಸಿಂಗ್ ಚೌಹಾಣ್

ಬಿ) ಸಂಜಯ್ ಅಗರವಾಲ್

ಸಿ) ರಾಕೇಶ್ ಕುಮಾರ್ ಸಿಂಗ್

ಡಿ) ಸಾಮ್ರಾಟ್ ಚೌಧರಿ

ಉತ್ತರ : ಬಿ) ಸಂಜಯ್ ಅಗರವಾಲ್

ವಿವರಣೆ –

ವಿವಾದಾತ್ಮಕ ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ವೇಳೆ ಸಂಯುಕ್ತ ಕಿಸಾನ್ ಮೋರ್ಚಾವು, ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಅಗತ್ಯತೆಯನ್ನು ಪ್ರತಿಪಾದಿಸಿತ್ತು. ಈ ಬಗ್ಗೆ ಪರಿಶೀಲಿಸಲು ಸರ್ಕಾರವು 2022 ಜುಲೈ ನಲ್ಲಿ ಸಮಿತಿ ರಚಿಸಿತ್ತು. **ಕೇಂದ್ರ ಕೃಷಿ ಸಚಿವಾಲಯದ ಮಾಜಿ ಕಾರ್ಯದರ್ಶಿ ಸಂಜಯ್ ಅಗರವಾಲ್‌ರವರು** ಸಮಿತಿಯ ಅಧ್ಯಕ್ಷರಾಗಿದ್ದಾರೆ.

15. 2024ರ ವಿಶ್ವ ವಿಖ್ಯಾತ ಮೈಸೂರು ದಸರಾ ಹಬ್ಬದ ಉದ್ಘಾಟಕರು ಯಾರು ?

ಎ) ಹೆಸರಾಂತ ಸಾಹಿತಿ ಹಂ.ಪ.ನಾಗರಾಜಯ್ಯ

ಬಿ) ನಾದ ಬ್ರಹ್ಮ ಹಂಸಲೇಖರು

ಸಿ) ಸುಧಾ ಮೂರ್ತಿ

ಡಿ) ದ್ರೌಪದಿ ಮುರ್ಮು

ಉತ್ತರ : ಎ) ಹೆಸರಾಂತ ಸಾಹಿತಿ ಹಂ.ಪ.ನಾಗರಾಜಯ್ಯ

16. ಕ್ವಾಡ್ ಸಂಘಟನೆಯ ಸದಸ್ಯ ರಾಷ್ಟ್ರಗಳು ಯಾವುವು ?

ಎ) ಆಸ್ಟ್ರೇಲಿಯಾ, ಇಂಡಿಯಾ, ಜಪಾನ್, ಅಮೆರಿಕ

ಬಿ) ಆಸ್ಟ್ರೇಲಿಯಾ, ಇಂಡಿಯಾ, ಇಟಲಿ, ಅಮೆರಿಕ

ಸಿ) ಫ್ರಾನ್ಸ್, ಇಂಡಿಯಾ, ಜಪಾನ್, ಅಮೆರಿಕ

ಡಿ) ಆಸ್ಟ್ರೇಲಿಯಾ, ಇಂಡಿಯಾ, ಜಪಾನ್, ಬ್ರಿಟನ್

ಉತ್ತರ : ಎ) ಆಸ್ಟ್ರೇಲಿಯಾ, ಇಂಡಿಯಾ, ಜಪಾನ್, ಅಮೆರಿಕ



ವಿವರಣೆ –

2024 ಸೆಪ್ಟೆಂಬರ್ 21ರಂದು ಕ್ವಾಡ್ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆ ಅಮೆರಿಕ ದೇಶದ ಡೆಲವೇರ್‌ನ ವಿಲ್ಮಿಂಗ್ಟನ್‌ನಲ್ಲಿ ನಡೆಯಿತು.ಈ ಶೃಂಗಸಭೆಯಲ್ಲಿ ಅಮೆರಿಕದ ಅಧ್ಯಕ್ಷರಾದ ಜೋ ಬೈಡನ್, ಜಪಾನ್‌ನ ಪ್ರಧಾನಿ ಫ್ಯೂಮಿಯೊ ಕಿಶಿಡಾ, ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಆಸ್ಟ್ರೇಲಿಯಾ ದೇಶದ ಪ್ರಧಾನಿ ಆಂಥೋನಿ ಅಲ್ಬನೀಸ್‌ರವರು ಭಾಗವಹಿಸಿದ್ದರು.

2024 ಸೆಪ್ಟೆಂಬರ್ 21ರಂದು ಕ್ವಾಡ್ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಯಲ್ಲಿ ಇಂಡೋ–ಫೆಸಿಫಿಕ್ ವಲಯದಲ್ಲಿ ಶಾಂತಿ ಸುಭದ್ರತೆ, ಸುಸ್ಥಿರ ಅಭಿವೃದ್ಧಿ, ಆರೋಗ್ಯ ಸಹಕಾರ, ನವೀನ ತಂತ್ರಜ್ಞಾನ ಅಭಿವೃದ್ಧಿ, ಉಕ್ರೇನ್–ರಷ್ಯಾ ಸಂಘರ್ಷ, ಇಸ್ರೇಲ್ ಹಮಾಸ್ ಸಮರದಿಂದ ಜಾಗತಿಕವಾಗಿ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಕ್ವಾಡ್ ನಾಯಕರು ಸಮಗ್ರವಾಗಿ ಚರ್ಚೆ ನಡೆಸಿದರು.

ಸೆಪ್ಟೆಂಬರ್ ತಿಂಗಳ ಪ್ರಚಲಿತ ಘಟನೆಗಳ ತರಗತಿಗಳು–

https://www.youtube.com/live/ZvQSIAYdSSQ?si=Gql0XQJbIPtLpkGP

https://www.youtube.com/live/fH-gkesB2qY?si=sDQ54aC4XrrCKDTR

https://www.youtube.com/live/9VYgydz4NqY?si=ha592U3iGaW_vmov

https://www.youtube.com/live/faWGG_k2dT4?si=ELrzMOtd-GLzcroG

https://www.youtube.com/live/nA5ENXETz5E?si=QT71qpSFGYC4u2ie

17. ಯುನೆಸ್ಕೋದ ವಿಶ್ವ ಸ್ಮಾರಕ ಸಮಿತಿಯ 46ನೇ ಸಭೆಯನ್ನು ಯಾರು ಉದ್ಘಾಟನೆ ಮಾಡಿದರು ?

ಎ) ಆಡ್ರೆ ಅಜೌಲೇ

ಬಿ) ಶ್ರೀ ನರೇಂದ್ರ ಮೋದಿ

ಸಿ) ಡಾ. ಸುಬ್ರಹ್ಮಣ್ಯಂ ಜೈಶಂಕರ್

ಡಿ) ಗಜೇಂದ್ರ ಸಿಂಗ್ ಶೇಖಾವತ್

ಉತ್ತರ : ಬಿ) ಶ್ರೀ ನರೇಂದ್ರ ಮೋದಿ

2024 ಜುಲೈ 21ರ ಸಂಜೆ 7 ಗಂಟೆಗೆ ನವದೆಹಲಿಯ ಭಾರತ ಮಂಡಪಂ ಎಂಬಲ್ಲಿ ಶ್ರೀ ನರೇಂದ್ರ ಮೋದಿಯವರು ಯುನೆಸ್ಕೋದ ವಿಶ್ವ ಸ್ಮಾರಕ ಸಮಿತಿಯ 46ನೇ ಸಭೆಯನ್ನು ಉದ್ಘಾಟನೆ ಮಾಡಿದರು. (ಪ್ರಸ್ತುತ ಯುನೆಸ್ಕೋದ ನಿರ್ದೇಶಕರು – ಆಡ್ರೆ ಅಜೌಲೇ)

18. ಮಹತಾರಿ ವಂದನ್ ಯೋಜನೆಯನ್ನು ಯಾವ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ ?

ಎ) ಮಹಾರಾಷ್ಟ್ರ
ಬಿ) ಒಡಿಶಾ
ಸಿ) ಛತ್ತೀಸ್‌ಘಡ
ಡಿ) ಅರುಣಾಚಲ ಪ್ರದೇಶ

ಉತ್ತರ : ಸಿ) ಛತ್ತೀಸ್‌ಘಡ

ವಿವರಣೆ –

ಛತ್ತೀಸ್‌ಘಡ್ ರಾಜ್ಯದಲ್ಲಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಅವರ ಆರೋಗ್ಯ ಮತ್ತು ಪೌಷ್ಟಿಕತೆಯ ಮಟ್ಟದಲ್ಲಿ ನಿರಂತರ ಸುಧಾರಣೆ ಮತ್ತು ಕುಟುಂಬದಲ್ಲಿ ಅವರ ನಿರ್ಣಾಯಕ ಪಾತ್ರವನ್ನು ಬಲಪಡಿಸಲು, ಸಮಾಜದಲ್ಲಿ ಮಹಿಳೆಯರ ಬಗ್ಗೆ ತಾರತಮ್ಯ, ಅಸಮಾನತೆ ಮತ್ತು ಅರಿವಿನ ಕೊರತೆಯನ್ನು ಹೋಗಲಾಡಿಸಲು **ಛತ್ತೀಸಘಡ್ ರಾಜ್ಯದಲ್ಲಿ ಮಹತಾರಿ ವಂದನ್ ಯೋಜನೆಯನ್ನು ಜಾರಿಗೊಳಿಸಲಾಗಿದೆ.** ಇದರ ಅಡಿಯಲ್ಲಿ ಅರ್ಹ ವಿವಾಹಿತ ಮಹಿಳೆಯರಿಗೆ ತಿಂಗಳಿಗೆ 1000 ರೂಪಾಯಿಗಳ ಆರ್ಥಿಕ ಸಹಾಯವನ್ನು ನೀಡಲಾಗುತ್ತದೆ.

19. ಅನುರಾ ಕುಮಾರ ದಿಸ್ಸನಾಯಕೆರವರು ಯಾವ ದೇಶದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು?

ಎ) ನೇಪಾಳ

ಬಿ) ಭೂತಾನ್

ಸಿ) ಶ್ರೀಲಂಕಾ

ಡಿ) ಮಾಲ್ಡೀವ್ಸ್

ಉತ್ತರ : ಸಿ) ಶ್ರೀಲಂಕಾ

20. ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಎಂದು ಆಚರಿಸಲಾಗುತ್ತದೆ ?

ಎ) ಸೆಪ್ಟೆಂಬರ್ 16

ಬಿ) ಅಕ್ಟೋಬರ್ 15

ಸಿ) ಸೆಪ್ಟೆಂಬರ್ 8

ಡಿ) ಸೆಪ್ಟೆಂಬರ್ 15

ಉತ್ತರ : ಡಿ) ಸೆಪ್ಟೆಂಬರ್ 15

ವಿವರಣೆ –

ವಿಶ್ವ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಕರ್ನಾಟಕ ಸರ್ಕಾರ ಸೆಪ್ಟೆಂಬರ್ 15 ರಂದು ಹಮ್ಮಿಕೊಂಡಿದ್ದ 2,500 ಕಿ.ಮೀ ಉದ್ದದ ಮಾನವ ಸರಪಳಿ, "ಲಂಡನ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್"ಗೆ ಸೇರಿದೆ. ಪ್ರಮಾಣ ಪತ್ರದಲ್ಲಿ ಕರ್ನಾಟದ ಬೀದರ್‌ನಿಂದ ಚಾಮರಾಜನಗರದವರೆಗೆ ನಿರ್ಮಿಸಲಾಗಿದ್ದ ಮಾನವ ಸರಪಳಿಯಲ್ಲಿ 25 ಲಕ್ಷಕ್ಕೂ ಅಧಿಕ (29,85,921) ಜನರು ಭಾಗವಹಿಸಿದ್ದರು. ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್,ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪ್ರಮಾಣ ಪತ್ರ ಲಭಿಸಿದೆ ಎಂದು ಸಮಾಜ ಕಲ್ಯಾಣ ಇಲಾಖೆ ತಿಳಿಸಿದೆ.

21. 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ವಿಜೇತರು ಯಾರು ?

1. ಸರ್ಬಿಯಾದ ನೊವಾಕ್ ಜೊಕೊವಿಚ್
2. ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್
3. ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್
4. ಸ್ಪೇನ್‌ನ ರಾಫೆಲ್ ನಡಾಲ್

ಉತ್ತರ: 3. ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್

ವಿವರಣೆ –

ಲಂಡನ್‌ನ ಅಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್ ನಲ್ಲಿ ನಡೆದ ಫೈನಲ್‌ನಲ್ಲಿ 3ನೇ ಶ್ರೇಯಾಂಕದ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್‌ರವರು 6–2, 6–2, 7–6 (7–4) ರಿಂದ ಜಯಗಳಿಸಿದರು ಇದು ಕಾರ್ಲೋಸ್ ಅಲ್ಕರಾಜ್‌ರವರ 4ನೇ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿಯಾಗಿದೆ.

2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷ ಸಿಂಗಲ್ಸ್ ವಿಭಾಗದಲ್ಲಿ ರನ್ನರ್ ಅಪ್ ಆದವರು – **ಸರ್ಬಿಯಾದ ನೊವಾಕ್ ಜೊಕೊವಿಚ್**

22. 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ವಿಜೇತರು ಯಾರು ?

1. ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಚಿಕೋವಾ
2. ಪೋಲೆಂಡ್‌ನ ಇಗಾ ಸ್ವಿಯಾಟೆಕ್
3. ಉಕ್ರೇನ್ ದೇಶದ ಲ್ಯುಡ್ಮಿಲಾ ಕಿಚೆನೊಕ್
4. ಇಟಲಿ ದೇಶದ ಜಾಸ್ಮಿನ್ ಪಾವೊಲಿನಿ

ಉತ್ತರ: ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಚಿಕೋವಾ

ವಿವರಣೆ :

ಲಂಡನ್‌ನ ಅಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ನಡೆದ ಫೈನಲ್‌ನಲ್ಲಿ 31ನೇ ಶ್ರೇಯಾಂಕದ ಜೆಕ್ ಗಣರಾಜ್ಯದ ಬಾರ್ಬೊರಾ ಕ್ರೆಚಿಕೋವಾರವರು 6–2, 2–6, 6–4 ರಿಂದ 7ನೇ ಶ್ರೇಯಾಂಕದ ಇಟಲಿ ದೇಶದ ಜಾಸ್ಮಿನ್ ಪಾವೊಲಿನಿರವರನ್ನು ಸೋಲಿಸಿ 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಬಾರ್ಬೊರಾ ಕ್ರೆಚಿಕೋವಾರವರು ಪಡೆದುಕೊಂಡರು. ಇದು ಬಾರ್ಬೊರಾ ಕ್ರೆಚಿಕೋವಾರವರಿಗೆ 2ನೇ ಗ್ರ್ಯಾನ್‌ಸ್ಲ್ಯಾಮ್ ಪ್ರಶಸ್ತಿಯಾಗಿದೆ. 2021ರಲ್ಲಿ ಇವರು ಫ್ರೆಂಚ್ ಓಪನ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ರನ್ನರ್ ಅಪ್ ಆದವರು – **ಇಟಲಿ ದೇಶದ ಜಾಸ್ಮಿನ್ ಪಾವೊಲಿನಿ**

23. “ದಿ ಆರ್ಡರ್ ಆಫ್ ಸೇಂಟ್ ಆಂಡ್ರ್ಯೂ ದಿ ಅಪೊಸ್ತಲ್”(The Order of St. Andrew the Apostle) ಯಾವ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ ?

ಎ) ಜಪಾನ್ ಬಿ) ಜರ್ಮನಿ

ಸಿ) ರಷ್ಯಾ ಡಿ) ಫ್ರಾನ್ಸ್

ಉತ್ತರ : ಸಿ) ರಷ್ಯಾ

ವಿವರಣೆ – 2024 ಜುಲೈ 9 ರಂದು ರಷ್ಯಾ ದೇಶದ ಅಧ್ಯಕ್ಷರಾದ ವ್ಲಾದಿಮಿರ್ ಪುಟಿನ್‌ರವರು ರಷ್ಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ “ದಿ ಆರ್ಡರ್ ಆಫ್ ಸೇಂಟ್ ಆಂಡ್ರ್ಯೂ ದಿ ಅಪೊಸ್ತಲ್”(The Order of St. Andrew the Apostle) ಅನ್ನು ಭಾರತದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಪ್ರಧಾನ ಮಾಡಿದರು

24. ಕರ್ನಾಟಕ ಸರ್ಕಾರದ ಹೊಸ ಮುಖ್ಯ ಕಾರ್ಯದರ್ಶಿಯಾಗಿ ಯಾರು ನೇಮಕವಾಗಿದ್ದಾರೆ ?

ಎ) ಬಿ.ಕೆ ಭಟ್ಟಾಚಾರ್ಯ
ಬಿ) ರಜನೀಶ್ ಗೋಯೆಲ್
ಸಿ) ಶಾಲಿನಿ ರಜನೀಶ್
ಡಿ) ಮಾಲತಿ ದಾಸ್

ಉತ್ತರ : ಸಿ) ಶಾಲಿನಿ ರಜನೀಶ್

ವಿವರಣೆ –

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ರಜನೀಶ್ ಗೋಯಲ್‌ರವರು 2024 ಜುಲೈ 31 ರಂದು ನಿವೃತ್ತಿಯಾಗಿದ್ದು, ಇವರ ಸ್ಥಾನಕ್ಕೆ ಹೊಸದಾಗಿ ಶಾಲಿನಿ ರಜನೀಶ್‌ರವರು ನೇಮಕವಾಗಿದ್ದಾರೆ.

25. ಇಬ್ರಾಹಿಂ ರೈಸಿರವರು ಯಾವ ದೇಶದ ಅಧ್ಯಕ್ಷರಾಗಿದ್ದರು ?

ಎ) ಇರಾನ್

ಬಿ) ಅಜರ್‌ಬೈಜಾನ್

ಸಿ) ಇರಾಕ್

ಡಿ) ಲಿಬಿಯಾ

ಉತ್ತರ : ಎ) ಇರಾನ್

ವಿವರಣೆ –

2024 ಮೇ ತಿಂಗಳಿನಲ್ಲಿ ಇರಾನ್–ಅಜರ್‌ಬೈಜಾನ್ ಗಡಿ ಸಮೀಪದ ಪರ್ವತ ಪ್ರದೇಶದಲ್ಲಿ ಹೆಲಿಕಾಪ್ಟರ್ ಪತನಗೊಂಡು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಮತ್ತು ಇರಾನ್‌ನ ವಿದೇಶಾಂಗ ಸಚಿವರಾದ ಹುಸೇನ್ ಅಮಿರ್ ಅಬ್ದುಲ್ಲಾಹಿಯಾನ್‌ರವರು ಮೃತಪಟ್ಟರು. ಇರಾನ್ ದೇಶದ ಹಂಗಾಮಿ ಅಧ್ಯಕ್ಷರಾಗಿ ಮಸೂದ್ ಪೆಜೆಶ್ಕಿಯಾನ್‌ರವರು ನೇಮಕಗೊಂಡಿದ್ದಾರೆ.

ಇರಾನ್ ದೇಶದ ರಾಜಧಾನಿ – ಟೆಹ್ರಾನ್

ಚಬಹಾರ್ ಬಂದರು ಇರಾನ್ ದೇಶದಲ್ಲಿದೆ.

ಇರಾನ್ ದೇಶದ ಕರೆನ್ಸಿ – ಇರಾನಿನ ರಿಯಾಲ್

ಇರಾನ್ ದೇಶವು ಅಜರ್‌ಬೈಜಾನ್, ಅರ್ಮೇನಿಯಾ, ತುರ್ಕಮೆನಿಸ್ತಾನ್, ಅಫ್ಘಾನಿಸ್ತಾನ್, ಪಾಕಿಸ್ತಾನ್, ಇರಾಕ್, ಟರ್ಕಿ ದೇಶಗಳೊಂದಿಗೆ ಭೂ ಗಡಿ ಹೊಂದಿದೆ ಮತ್ತು ಕುವೈತ್, ಸೌದಿ ಅರೇಬಿಯಾ, ಬಹ್ರೇನ್, ಕತಾರ್, ಯುಎಇ ಮತ್ತು ಓಮನ್ ದೇಶಗಳೊಂದಿಗೆ ಜಲಗಡಿಯನ್ನು ಹೊಂದಿದೆ.

ಪ್ರಸ್ತುತ ಇರಾನ್ ದೇಶದ ಅಧ್ಯಕ್ಷರು – **ಮಸೂದ್ ಪೆಜೆಶ್ಕಿಯಾನ್**

26. 2024ರ ಅಮೆರಿಕ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಯಾರು ?

ಎ) ಇಟಲಿಯ ಜೆನ್ನಿಕ್ ಸಿನ್ನರ್

ಬಿ) ಸರ್ಬಿಯದ ನೋವಾಕ್ ಜೋಕೊವಿಕ್

ಸಿ) ಸ್ಪೇನ್ ದೇಶದ ರಫೆಲ್ ನಡಾಲ್

ಡಿ) ಅಮೆರಿಕದ ಟೇಲರ್ ಫ್ರಿಟ್ಜ್

ಉತ್ತರ : ಎ) ಇಟಲಿಯ ಜೆನ್ನಿಕ್ ಸಿನ್ನರ್

ವಿವರಣೆ –

ಜೆನ್ನಿಕ್ ಸಿನ್ನರ್‌ರವರು ಯುಎಸ್ ಓಪನ್ ಟೆನ್ನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಪಡೆದ ಇಟಲಿ ದೇಶದ ಮೊದಲಿಗರು

2024ರ ಯುಎಸ್ ಓಪನ್ ಟೆನ್ನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ರನ್ನರ್‌ಅಪ್ ಆದವರು – **ಅಮೆರಿಕದ ಟೇಲರ್ ಫ್ರಿಟ್ಜ್**

27. 2024ರ ಅಮೆರಿಕ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಪಡೆದವರು ಯಾರು ?

ಎ) ಅಮೆರಿಕದ ಜೆಸ್ಸಿಕಾ ಪೆಗುಲಾ

ಬಿ) ಬೆಲಾರಸ್ ದೇಶದ ಅರಿನಾ ಸಬಲೆಂಕಾ.

ಸಿ) ಅಮೆರಿಕದ ಕೊಕೊ ಗಾಫ್

ಡಿ) ಜೆಕ್ ರಿಪಬ್ಲಿಕ್ ದೇಶದ ಬಾರ್ಬೊರಾ ಕ್ರೆಜಿಕೋವಾ

ಉತ್ತರ : ಬಿ) ಬೆಲಾರಸ್ ದೇಶದ ಅರಿನಾ ಸಬಲೆಂಕಾ.

ವಿವರಣೆ –

2024ರ ಯುಎಸ್ ಓಪನ್ ಟೆನ್ನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ರನ್ನರ್‌ಅಪ್ ಆದವರು – ಅಮೆರಿಕದ ಜೆಸ್ಸಿಕಾ ಪೆಗುಲಾ

28. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಅಕ್ಟೋಬರ್ 29ರಂದು ಕೇಂದ್ರ ಗೃಹ ಸಚಿವರಾದ ಅಮಿತ್ ಷಾ ರವರು ಜನನ ಹಾಗೂ ಮರಣ ನೋಂದಣಿಯನ್ನು ಸರಳಗೊಳಿಸುವ ಸಲುವಾಗಿ 'ನಾಗರಿಕ ನೋಂದಣಿ ವ್ಯವಸ್ಥೆ' (ಸಿಆರ್‌ಎಸ್) ಮೊಬೈಲ್ ಆ್ಯಪ್‌ಗೆ ಚಾಲನೆ ನೀಡಿದರು.

2) ಜನನ ಹಾಗೂ ಮರಣ ನೋಂದಣಿಯನ್ನು ಸರಳಗೊಳಿಸುವ 'ನಾಗರಿಕ ನೋಂದಣಿ ವ್ಯವಸ್ಥೆ' (CRS - Civil Registration System) ಮೊಬೈಲ್ ಆ್ಯಪ್ ಅನ್ನು ರಿಜಿಸ್ಟ್ರಾರ್ ಜನರಲ್ ಹಾಗೂ ಜನಗಣತಿ ಆಯುಕ್ತಾಲಯ ಅಭಿವೃದ್ಧಿಪಡಿಸಿದೆ.

3) ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು – ಮೃತ್ಯುಂಜಯ್ ಕುಮಾರ್ ನಾರಾಯಣ್

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

29. ಮನು ಭಾಕರ್‌ರವರು ಯಾವ ಆಟಕ್ಕೆ ಹೆಸರುವಾಸಿ ?

ಎ) ಶೂಟಿಂಗ್

ಬಿ) ಹಾಕಿ

ಸಿ) ವೇಟ್‌ಲಿಫ್ಟಿಂಗ್

ಡಿ) ಈಜು

ಉತ್ತರ : ಎ) ಶೂಟಿಂಗ್

ವಿವರಣೆ –

ಮನು ಭಾಕರ್‌ರವರು ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಎರಡು ಪದಕ ಜಯಿಸಿದ ಭಾರತದ ಏಕೈಕ ಮಹಿಳಾ ಸ್ಪರ್ಧಿ.

30. ಸ್ವಪ್ನಿಲ್ ಕುಸಾಳೆರವರು ಯಾವ ಆಟಕ್ಕೆ ಹೆಸರುವಾಸಿ ?

ಎ) ಹಾಕಿ

ಬಿ) ಶೂಟಿಂಗ್

ಸಿ) ವೇಟ್‌ಲಿಫ್ಟಿಂಗ್

ಡಿ) ಈಜು

ಉತ್ತರ : ಬಿ) ಶೂಟಿಂಗ್

ವಿವರಣೆ –

ಸ್ವಪ್ನಿಲ್ ಕುಸಾಳೆರವರು ಪ್ಯಾರಿಸ್ ಒಲಿಂಪಿಕ್ಸ್‌ನ 50 ಮೀ. ರೈಫಲ್ ತ್ರೀ ಪೊಸಿಷನ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು. ಇವರು ಮಹಾರಾಷ್ಟ್ರ ರಾಜ್ಯದವರು.

31. 2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ನೀರಜ್ ಚೋಪ್ರಾರವರು ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕ ಪಡೆಯಲು ಎಷ್ಟು ಮೀಟರ್ ದೂರ ಜಾವೆಲಿನ್ ಥ್ರೋ ಮಾಡಿದರು ?

ಎ) 92.97 ಮೀಟರ್ ದೂರ ಥ್ರೋ ಮಾಡಿದರು

ಬಿ) 89.94 ಮೀಟರ್ ದೂರ ಥ್ರೋ ಮಾಡಿದರು

ಸಿ) 89.45 ಮೀಟರ್ ದೂರ ಥ್ರೋ ಮಾಡಿದರು

ಡಿ) 88.54 ಮೀಟರ್ ದೂರ ಥ್ರೋ ಮಾಡಿದರು

ಉತ್ತರ : ಸಿ) 89.45 ಮೀಟರ್ ದೂರ ಥ್ರೋ ಮಾಡಿದರು

ವಿವರಣೆ –

2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಪಾಕಿಸ್ತಾನ ದೇಶದ ಅರ್ಷದ್ ನದೀಂರವರು 92.97 ಮೀಟರ್ ದೂರ ಜಾವೆಲಿನ್ ಥ್ರೋ ಮಾಡುವುದರ ಮೂಲಕ ಚಿನ್ನದ ಪದಕ, ಭಾರತದ ನೀರಜ್ ಚೋಪ್ರಾರವರು 89.45 ಮೀಟರ್ ದೂರ ಜಾವೆಲಿನ್ ಥ್ರೋ ಮಾಡುವುದರ ಮೂಲಕ ಬೆಳ್ಳಿಯ ಪದಕ ಮತ್ತು ಗ್ರೆನೆಡಾದ ಆ್ಯಂಡರ್ಸನ್ ಪೀಟರ್‌ರವರು 88.54 ಮೀಟರ್ ದೂರ ಜಾವೆಲಿನ್ ಥ್ರೋ ಮಾಡುವುದರ ಮೂಲಕ ಕಂಚಿನ ಪದಕ ಪಡೆದರು.

32. 2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪುರುಷರ ಸಿಂಗಲ್ಸ್ ಟೆನಿಸ್ ವಿಭಾಗದಲ್ಲಿ ಚಿನ್ನದ ಪದಕ ಪಡೆದವರು ಯಾರು ?

ಎ) ಸ್ಪೇನ್‌ನ ಕಾರ್ಲೋಸ್ ಆಲ್ಕರಾಜ್

ಬಿ) ಸರ್ಬಿಯಾದ ನೊವಾಕ್ ಜೊಕೊವಿಚ್

ಸಿ) ಇಟಲಿಯ ಲೊರೆಂಜೊ ಮುಸೆಟ್ಟಿ

ಡಿ) ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್

ಉತ್ತರ : ಬಿ) ಸರ್ಬಿಯಾದ ನೊವಾಕ್ ಜೊಕೊವಿಚ್

ವಿವರಣೆ–

2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಪುರುಷರ ಸಿಂಗಲ್ಸ್ ಟೆನಿಸ್ ವಿಭಾಗದಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್‌ರವರು ಚಿನ್ನದ ಪದಕ, ಸ್ಪೇನ್‌ನ ಕಾರ್ಲೋಸ್ ಆಲ್ಕರಾಜ್‌ರವರು ಬೆಳ್ಳಿಯ ಪದಕ ಮತ್ತು ಇಟಲಿಯ ಲೊರೆಂಜೊ ಮುಸೆಟ್ಟಿರವರು ಕಂಚಿನ ಪದಕ ಪಡೆದರು.

33. ಅಹೋಂ ರಾಜಮನೆತನ ನಿರ್ಮಿಸುತ್ತಿದ್ದ ದಿಬ್ಬ ಸ್ವರೂಪದ ಸಮಾಧಿಗಳಾದ "ಮೊಯ್ದಂ" ಯಾವ ರಾಜ್ಯದಲ್ಲಿ ಕಂಡುಬರುತ್ತವೆ ?

ಎ) ಹರಿಯಾಣ

ಬಿ) ಅಸ್ಸಾಂ

ಸಿ) ಮೇಘಾಲಯ

ಡಿ) ತಮಿಳುನಾಡು

ಉತ್ತರ : ಬಿ) ಅಸ್ಸಾಂ

ವಿವರಣೆ–

ಅಹೋಂ ರಾಜಮನೆತನ ನಿರ್ಮಿಸುತ್ತಿದ್ದ ದಿಬ್ಬ ಸ್ವರೂಪದ ಸಮಾಧಿಗಳಾದ "ಮೊಯ್ದಂ"ಗಳನ್ನು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲಾಗಿದೆ.

ಈಶಾನ್ಯ ಭಾಗದ ಐತಿಹಾಸಿಕ ತಾಣವೊಂದಕ್ಕೆ ಯುನೆಸ್ಕೊ ಪಟ್ಟಿಯಲ್ಲಿ ಇದೇ ಮೊದಲ ಬಾರಿಗೆ ಸ್ಥಾನ ಸಿಕ್ಕಿದೆ. ನವದೆಹಲಿಯಲ್ಲಿ ನಡೆದ ವಿಶ್ವ ಪಾರಂಪರಿಕ ಸಮಿತಿಯ 46ನೇ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಗಿದೆ. ಭಾರತ ಇದೇ ಮೊದಲ ಬಾರಿಗೆ ವಿಶ್ವ ಪಾರಂಪರಿಕ ಸಮಿತಿಯ ಸಭೆಯ ಆತಿಥ್ಯ ವಹಿಸಿಕೊಂಡಿದೆ.

ಮೊಯ್ದಂಗಳು ಭದ್ರವಾದ ಕೋಣೆಗಳನ್ನು (ಚೌ–ಚಲಿ) ಹೊಂದಿದ್ದು, ಎರಡು ಮಹಡಿಗಳಿಂದ ಕೂಡಿರುತ್ತವೆ. ಅರ್ಧವೃತ್ತಾಕಾರದ ಪ್ರವೇಶ ದ್ವಾರ ನಿರ್ಮಿಸಲಾಗಿರುತ್ತದೆ. ಮೇಲ್ಭಾಗದ ಅರ್ಧಗೋಳಾಕಾರದ ರಚನೆಯು ಮಣ್ಣು ಇಟ್ಟಿಗೆಗಳಿಂದ ಕೂಡಿರುತ್ತದೆ ಎಂದು ಯುನೆಸ್ಕೊ ವೆಬ್‌ಸೈಟ್‌ನಲ್ಲಿ ವಿವರಿಸಲಾಗಿದೆ.

"ಮೊಯ್ದಂ"ಗಳ ಒಳಭಾಗದಲ್ಲಿ ಮಧ್ಯದಲ್ಲಿರುವ ವೇದಿಕೆ ಮೇಲೆ ಶವ ಇಡಲಾಗುತ್ತಿತ್ತು. ರಾಜಮನೆತನ ಲಾಂಛನ, ಕಟ್ಟಿ, ಆನೆದಂತ, ಕಬ್ಬಿಣ ಅಥವಾ ಚಿನ್ನದ ಆಭರಣಗಳು, ಆಯುಧಗಳು, ಬಟ್ಟೆಗಳು ಸೇರಿದಂತೆ ಮೃತ ವ್ಯಕ್ತಿ ಬಳಸುತ್ತಿದ್ದ ಹಲವು ವಸ್ತುಗಳನ್ನು ಸಹ ಸಮಾಧಿಯಲ್ಲಿ ಇಡಲಾಗುತ್ತಿತ್ತು ಎಂದು ವಿವರಿಸಲಾಗಿದೆ.

34. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಸರ್ದಾರ್ ವಲ್ಲಭಬಾಯ್ ಪಟೇಲ್‌ರವರು 1875 ಅಕ್ಟೋಬರ್31 ರಂದು ಗುಜರಾತ್ ರಾಜ್ಯದ ನಾಡಿಯಾಡ್ ಎಂಬಲ್ಲಿ ಜನಿಸಿದರು ಇವರ ಜನ್ಮದಿನದ ನೆನಪಿಗಾಗಿ ಪ್ರತಿ ವರ್ಷ ಅಕ್ಟೋಬರ್ 31ನ್ನು ರಾಷ್ಟ್ರೀಯ ಏಕತಾ ದಿವಸ್ (National Unity Day) ಎಂದು ಆಚರಿಸಲಾಗುತ್ತದೆ.

2) ಸರ್ದಾರ್ ವಲ್ಲಭಬಾಯ್ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿ ತೆಲಂಗಾಣ ರಾಜ್ಯದ ಹೈದ್ರಾಬಾದ್ ನಗರದಲ್ಲಿ ಇದೆ.

3) ಸರ್ದಾರ್ ವಲ್ಲಭಬಾಯ್ ಪಟೇಲ್‌ರವರಿಗೆ 1991ರಲ್ಲಿ ಮರಣೋತ್ತರವಾಗಿ ಭಾರತ ರತ್ನ ಲಭಿಸಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

35. ಅಂಶುಮಾನ್ ಗಾಯಕ್ವಾಡ್‌ರವರು ಯಾವ ಆಟಕ್ಕೆ ಹೆಸರುವಾಸಿ ?

ಎ) ಫುಟ್ಬಾಲ್

ಬಿ) ಹಾಕಿ

ಸಿ) ಕ್ರಿಕೆಟ್

ಡಿ) ವಾಲಿಬಾಲ್

ಉತ್ತರ : ಸಿ) ಕ್ರಿಕೆಟ್

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

ವಿವರಣೆ –

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಅಂಶುಮಾನ್ ಗಾಯಕ್ವಾಡ್‌ರವರು 2024 ಜುಲೈ 31 ರಂದು ನಿಧನರಾದರು. ಬಲಗೈ ಬ್ಯಾಟರ್ ಆಗಿದ್ದ ಅಂಶುಮಾನ್ ಗಾಯಕ್ವಾಡ್‌ರವರು ಭಾರತ ತಂಡದಲ್ಲಿ 40 ಟೆಸ್ಟ್ ಮತ್ತು 15 ಏಕದಿನ ಪಂದ್ಯಗಳಲ್ಲಿ ಆಡಿದ್ದರು. 206 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದರು. 1975 ರಿಂದ 1987ರ ಅವಧಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅಂಶುಮಾನ್ ಗಾಯಕ್ವಾಡ್‌ರವರು ಭಾರತ ತಂಡದ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದರು. ಶಾರ್ಜಾದಲ್ಲಿ 1998ರಲ್ಲಿ ನಡೆದಿದ್ದ ಟೂರ್ನಿ ಮತ್ತು 1999ರಲ್ಲಿ ದೆಹಲಿಯಲ್ಲಿ ಅನಿಲ್ ಕುಂಬ್ಳೆ 10 ವಿಕೆಟ್ ಗಳಿಸಿದ್ದ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ಅಂಶುಮಾನ್ ಗಾಯಕ್ವಾಡ್‌ರವರು ಕೋಚ್ ಆಗಿದ್ದರು.ಇವರ ಅವಧಿಯಲ್ಲಿ ಆಫ್ ಸ್ಪಿನ್ನರ್ ಹರಭಜನ್ ಸಿಂಗ್‌ರವರು ಕ್ರಿಕೆಟ್‌ಗೆ ಪಾದರ್ಪಣೆ ಮಾಡಿದ್ದರು.

36. ಪಂಡಿತ್ ರಾಜೀವ್ ತಾರಾನಾಥರು ಯಾವುದಕ್ಕೆ ಹೆಸರುವಾಸಿ ?

ಎ) ತಬಲಾ ವಾದಕರು

ಬಿ) ವೀಣಾ ವಾದಕರು

ಸಿ) ಸರೋದ್ ವಾದಕರು

ಡಿ) ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರು

ಉತ್ತರ : ಸಿ) ಸರೋದ್ ವಾದಕರು

ಪಂಡಿತ್ ರಾಜೀವ್ ತಾರಾನಾಥ – **ಪ್ರಸಿದ್ಧ ಸರೋದ್‌ವಾದಕರು**

ಪ್ರಸಿದ್ಧ ಸರೋದ್ ವಾದಕರಾದ ಪಂಡಿತ್ ರಾಜೀವ್ ತಾರಾನಾಥರವರು 2024 ಜೂನ್ 11 ರಂದು ನಿಧನ ಹೊಂದಿದರು

37. ಪ್ರಸ್ತುತ ರಾಷ್ಟ್ರೀಯ ಭದ್ರತಾ ಸಲಹೆಗಾರರು ಯಾರು ?

ಎ) ಪಿ.ಕೆ ಮಿಶ್ರಾ

ಬಿ) ಅಜಿತ್ ದೋವಾಲ್

ಸಿ) ವಿಕ್ರಂ ಮಿಸ್ರಿ

ಡಿ) ಬ್ರಿಜೇಶ್ ಮಿಶ್ರಾ

ಉತ್ತರ : ಬಿ) ಅಜಿತ್ ದೋವಾಲ್

ವಿವರಣೆ–

ರಾಷ್ಟ್ರೀಯ ಭದ್ರತಾ ಸಲಹೆಗಾರರ ಹುದ್ದೆ–

1998 ಮೇ 19 ರಂದು ಭಾರತದ ಅಂದಿನ ಪ್ರಧಾನ ಮಂತ್ರಿಯಾದ ಶ್ರೀ ಅಟಲ್ ಬಿಹಾರಿ ವಾಜಪೇಯಿರವರು ರಾಷ್ಟ್ರೀಯ ಭದ್ರತಾ ಸಲಹೆಗಾರರ ಹುದ್ದೆಯನ್ನು ಆರಂಭಿಸಿದರು, ಮೊದಲ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಭಾರತೀಯ ವಿದೇಶಾಂಗ ಸೇವಾ ಅಧಿಕಾರಿ ಬ್ರಿಜೇಶ್ ಮಿಶ್ರಾರವರನ್ನು ನೇಮಕ ಮಾಡಲಾಯಿತು. ನಂತರ ಜೆಎನ್ ದೀಕ್ಷಿತ್, ಎಂ.ಕೆ ನಾರಾಯಣ್ ಮತ್ತು ಶಿವಶಂಕರ್ ಮೆನನ್‌ರವರು ಕರ್ತವ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಅಜಿತ್ ದೋವಲ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

38. ಪ್ರಸ್ತುತ ಪ್ರಧಾನ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಯಾರು ?

ಎ) ಶಿವಶಂಕರ್ ಮೆನನ್

ಬಿ) ಎಂ.ಕೆ ನಾರಾಯಣ್

ಸಿ) ಪಿ.ಕೆ ಮಿಶ್ರಾ

ಡಿ) ಅನೀಶ್ ದಯಾಳ್ ಸಿಂಗ್

ಉತ್ತರ : ಸಿ) ಪಿ.ಕೆ ಮಿಶ್ರಾ

ವಿವರಣೆ –

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಪ್ರಧಾನ ಕಾರ್ಯದರ್ಶಿಯಾಗಿ ಮಾಜಿ ಐಪಿಎಸ್ ಅಧಿಕಾರಿ ಪಿ.ಕೆ ಮಿಶ್ರಾ ಅವರನ್ನು ಮರುನೇಮಕ ಮಾಡಲಾಗಿದೆ. 2024 ಜೂನ್ 10ರಿಂದಲೇ ಈ ಆದೇಶ ಜಾರಿಯಾಗಿದೆ.

39. 2024ರಲ್ಲಿ ಇಟಲಿಯಲ್ಲಿ ನಡೆದ ಜಿ–7 ರಾಷ್ಟ್ರಗಳ ಶೃಂಗಸಭೆಯಲ್ಲಿ ಉಕ್ರೇನ್ ದೇಶಕ್ಕೆ ಎಷ್ಟು ಬಿಲಿಯನ್ ಡಾಲರ್ ಸಾಲ ನೀಡಲು ನಿರ್ಧರಿಸಲಾಗಿದೆ ?

ಎ) 40 ಬಿಲಿಯನ್ ಡಾಲರ್

ಬಿ) 50 ಬಿಲಿಯನ್ ಡಾಲರ್

ಸಿ) 80 ಬಿಲಿಯನ್ ಡಾಲರ್

ಡಿ) 100 ಬಿಲಿಯನ್ ಡಾಲರ್

ಉತ್ತರ : ಬಿ) 50 ಬಿಲಿಯನ್ ಡಾಲರ್

ವಿವರಣೆ –

ಮುಟ್ಟುಗೋಲು ಹಾಕಿಕೊಂಡಿರುವ ರಷ್ಯಾದ ಆಸ್ತಿಗಳ ಆಧಾರದ ಮೇಲೆ ಉಕ್ರೇನ್‌ಗೆ 50 ಬಿಲಿಯನ್ ಡಾಲರ್ (ಸುಮಾರು ₹ 4.17 ಲಕ್ಷ ಕೋಟಿ) ಸಾಲ ನೀಡುವ ಒಪ್ಪಂದಕ್ಕೆ ಜಿ–7 ರಾಷ್ಟ್ರಗಳ ಶೃಂಗಸಭೆಯಲ್ಲಿ ಒಪ್ಪಿಗೆ ನೀಡಲಾಯಿತು. ಇದರಿಂದಾಗಿ ರಷ್ಯಾದ ವಿರುದ್ಧ ಹೋರಾಡಲು ಉಕ್ರೇನ್‌ಗೆ ಬಾರಿ ಬೆಂಬಲ ಸಿಕ್ಕಂತಾಯಿತು. ಸಾಲ ನೀಡುವ ಕುರಿತಾದ ಈ ಒಪ್ಪಂದದ ಬಗ್ಗೆ ಅಮೆರಿಕ ಪ್ರಸ್ತಾಪವನ್ನು ಸಲ್ಲಿಸಿತ್ತು.

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ
https://dhronacharyaacademy.com/

40. 2024 ಜೂನ್ 13 ರಿಂದ 15ರವರೆಗೆ G–7 ರಾಷ್ಟ್ರಗಳ ಮುಖ್ಯಸ್ಥರ 50ನೇ ಶೃಂಗಸಭೆಯನ್ನು ಯಾವ ದೇಶದಲ್ಲಿ ಆಯೋಜಿಸಲಾಗಿತ್ತು ?

ಎ) ಜಪಾನ್

ಬಿ) ಜರ್ಮನಿ

ಸಿ) ಇಟಲಿ

ಡಿ) ಫ್ರಾನ್ಸ್

ಉತ್ತರ : ಸಿ) ಇಟಲಿ

41. ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಆಯುಕ್ತರಾಗಿ ಯಾರು ನೇಮಕವಾಗಿದ್ದಾರೆ ?

ಎ) ಡಾ. ಬಿ ಬಸವರಾಜು

ಬಿ) ಜಿ.ಎಸ್ ಸಂಗ್ರೇಶಿ

ಸಿ) ರಾಜೀವ್ ಕುಮಾರ್

ಡಿ) ಮನೋಜ್ ಕುಮಾರ್ ಮೀನಾ

ಉತ್ತರ : ಬಿ) ಜಿ.ಎಸ್ ಸಂಗ್ರೇಶಿ

ವಿವರಣೆ –

ಕರ್ನಾಟಕ ರಾಜ್ಯ ಚುನಾವಣಾ ಆಯುಕ್ತರನ್ನು ಮಾನ್ಯ ರಾಜ್ಯಪಾಲರು ನೇಮಕ ಮಾಡುತ್ತಾರೆ. ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ಆಯುಕ್ತರ ಅಧಿಕಾರವಧಿ – 5 ವರ್ಷ ಅಥವಾ 65 ವರ್ಷಗಳು

42. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಮಹಾನಿರ್ದೇಶಕರು ಯಾರು ?

ಎ) ಪ್ರದೀಪ್ ಸಿಂಗ್ ಖರೋಲಾ

ಬಿ) ಸುಬೋದ್ ಕುಮಾರ್ ಸಿಂಗ್

ಸಿ) ಚೆಲ್ಲಾ ಶ್ರೀನಿವಾಸುಲು ಸೆಟ್ಟಿ

ಡಿ) ಕೆ. ರಾಧಾಕೃಷ್ಣನ್

ಉತ್ತರ : ಎ) ಪ್ರದೀಪ್ ಸಿಂಗ್ ಖರೋಲಾ

ವಿವರಣೆ –

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ನಿರ್ಗಮಿತ ಮಹಾನಿರ್ದೇಶಕರು – ಸುಬೋದ್ ಕುಮಾರ್ ಸಿಂಗ್

43. ಪ್ರಸ್ತುತ ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದ ಪಟ್ಟಿಯಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ ?

ಎ) 20ನೇ ಸ್ಥಾನ
ಬಿ) 30ನೇ ಸ್ಥಾನ
ಸಿ) 63ನೇ ಸ್ಥಾನ
ಡಿ) 91ನೇ ಸ್ಥಾನ

ಉತ್ತರ : ಸಿ) 63ನೇ ಸ್ಥಾನ



ವಿವರಣೆ –

ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದ ಪಟ್ಟಿಯನ್ನು ವಿಶ್ವ ಆರ್ಥಿಕ ವೇದಿಕೆ ಸಿದ್ಧಪಡಿಸಿ ಬಿಡುಗಡೆ ಮಾಡಿದೆ. ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದ ಪಟ್ಟಿಯಲ್ಲಿ ಸ್ವೀಡನ್ ದೇಶವು ಮೊದಲ ಸ್ಥಾನದಲ್ಲಿದ್ದು, ಡೆನ್ಮಾರ್ಕ್, ಫಿನ್‌ಲ್ಯಾಂಡ್, ಸ್ವಿಟ್ಜರ್‌ಲ್ಯಾಂಡ್ ಮತ್ತು ಫ್ರಾನ್ಸ್ ದೇಶಗಳು ನಂತರದ ಸ್ಥಾನದಲ್ಲಿವೆ. ಚೀನಾ ದೇಶವು 20ನೇ ಸ್ಥಾನದಲ್ಲಿದೆ.

ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದಲ್ಲಿ ಭಾರತವು 63ನೇ ಸ್ಥಾನ ಪಡೆದಿದೆ.

44. 18ನೇ ಲೋಕಸಭೆಗೆ ಹಂಗಾಮಿ ಸ್ಪೀಕರ್ ಆಗಿ (protem speaker) ಯಾರು ನೇಮಕವಾಗಿದ್ದಾರೆ ?

ಎ) ಕೆ.ಸುರೇಶ್

ಬಿ) ಟಿ.ಆರ್ ಬಾಲು

ಸಿ) ರಾಧಾ ಮೋಹನ್ ಸಿಂಗ್

ಡಿ) ಭರ್ತೃಹರಿ ಮಹತಾಬ್

ಉತ್ತರ : ಡಿ) ಭರ್ತೃಹರಿ ಮಹತಾಬ್

ವಿವರಣೆ –

ಲೋಕಸಭೆಯ ಹಂಗಾಮಿ ಸ್ಪೀಕರ್(protem speaker) ರವರಿಗೆ ಮಾನ್ಯ ರಾಷ್ಟ್ರಪತಿಯವರು ಪ್ರಮಾಣ ವಚನವನ್ನು ಬೋಧಿಸುತ್ತಾರೆ. ಹೊಸದಾಗಿ ಚುನಾಯಿತರಾದ ಎಲ್ಲಾ ಲೋಕಸಭೆಯ ಸದಸ್ಯರಿಗೆ ಹಂಗಾಮಿ ಸ್ಪೀಕರ್‌ರವರು ಪ್ರಮಾಣ ವಚನವನ್ನು ಬೋಧಿಸುತ್ತಾರೆ. ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲು ಹಂಗಾಮಿ ಸ್ಪೀಕರ್‌ರವರಿಗೆ ನೆರವಾಗಲು ಸದಸ್ಯರಾದ ಕೆ.ಸುರೇಶ್ (ಕಾಂಗ್ರೆಸ್) ಟಿ.ಆರ್ ಬಾಲು (ಡಿಎಂಕೆ), ರಾಧಾ ಮೋಹನ್ ಸಿಂಗ್, ಫಗ್ಗನ್ ಸಿಂಗ್ ಕುಲಸ್ತೆ (ಇಬ್ಬರೂ ಬಿಜೆಪಿ) ಹಾಗೂ ಸುದೀಪ್ ಬಂದ್ಯೋಪಾಧ್ಯಾಯ (ಟಿಎಂಸಿ) ಇವರನ್ನು ಮಾನ್ಯ ರಾಷ್ಟ್ರಪತಿಯವರು ನೇಮಕ ಮಾಡಿದ್ದರು

45. ಭಾರತೀಯ ಸೇನೆಯ 30ನೇ ಮುಖ್ಯಸ್ಥರಾಗಿ (ಜನರಲ್) ಯಾರು ಅಧಿಕಾರ ಸ್ವೀಕರಿಸಿದರು ?

ಎ) ಜನರಲ್ ಮನೋಜ್ ಪಾಂಡೆ

ಬಿ) ಜನರಲ್ ಉಪೇಂದ್ರ ದ್ವಿವೇದಿ

ಸಿ) ಜನರಲ್ ಅನಿಲ್ ಚೌಹಾಣ್

ಡಿ) ಜನರಲ್ ಎನ್.ಎಸ್ ರಾಜಸುಬ್ರಹ್ಮಣಿ

ಉತ್ತರ : ಬಿ) ಜನರಲ್ ಉಪೇಂದ್ರ ದ್ವಿವೇದಿ

ಭಾರತೀಯ ಸೇನೆಯ 29ನೇ ಮುಖ್ಯಸ್ಥರಾಗಿದ್ದ (ಜನರಲ್)ಜನರಲ್ ಮನೋಜ್ ಪಾಂಡೆರವರು 2024 ಜೂನ್ 30ರಂದು ನಿವೃತ್ತರಾದರು.

46. ವಿಶ್ವ ಪರಿಸರ ದಿನ ಎಂದು ಆಚರಿಸಲಾಗುತ್ತದೆ ?

ಎ) ಜೂನ್ 1

ಬಿ) ಜೂನ್ 3

ಸಿ) ಜೂನ್ 5

ಡಿ) ಜೂನ್ 21

ಉತ್ತರ : ಸಿ) ಜೂನ್ 5

1972 ಜೂನ್ 5 ರಿಂದ 16 ರವರೆಗೆ ಸ್ವೀಡನ್ ದೇಶದ ಸ್ಟಾಕ್ ಹೋಮ್ ನಗರದಲ್ಲಿ ವಿಶ್ವ ಸಂಸ್ಥೆಯು ಮಾನವ ಪರಿಸರದ ಮೇಲಿನ ಸ್ಟಾಕ್ ಹೋಮ್ ಸಮ್ಮೇಳನವನ್ನು ಆಯೋಜಿಸಿತ್ತು. ಈ ಸಮ್ಮೇಳನ ವಿಶ್ವ ಸಂಸ್ಥೆ ಆಯೋಜಿಸಿದ ಪರಿಸರಕ್ಕೆ ಸಂಬಂಧಿಸಿದ ಪ್ರಥಮ ಸಮ್ಮೇಳನವಾಗಿತ್ತು. ಇದರ ನೆನಪಿಗಾಗಿ ಪ್ರತಿ ವರ್ಷ ಜೂನ್ 5 ಅನ್ನು ವಿಶ್ವ ಪರಿಸರ ಎಂದು ಆಚರಿಸಲಾಗುತ್ತಿದೆ.

47. 2024ರ ಜಾಗತಿಕ ಲಿಂಗ ಅಂತರ ಸೂಚ್ಯಂಕದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ ?

ಎ) 127ನೇ ಸ್ಥಾನ

ಬಿ) 128ನೇ ಸ್ಥಾನ

ಸಿ) 129ನೇ ಸ್ಥಾನ

ಡಿ) 130 ನೇ ಸ್ಥಾನ

ಉತ್ತರ : ಸಿ) 129ನೇ ಸ್ಥಾನ

'ವಿಶ್ವ ಆರ್ಥಿಕ ವೇದಿಕೆ' ಬಿಡುಗಡೆ ಮಾಡಿದ ಜಾಗತಿಕ ಲಿಂಗ ಅಂತರ ಸೂಚ್ಯಂಕದಲ್ಲಿ ಭಾರತವು 146 ರಾಷ್ಟ್ರಗಳ ಪೈಕಿ '129'ನೇ ಸ್ಥಾನದಲ್ಲಿದೆ.

48. ಗಣಿತ ಶಾಸ್ತ್ರದ ನೊಬೆಲ್ ಪ್ರಶಸ್ತಿ ಎಂದು ಯಾವ ಪ್ರಶಸ್ತಿಯನ್ನು ಕರೆಯುತ್ತಾರೆ ?

ಎ) ಸಸ್ತ್ರ ರಾಮನುಜನ್ ಪ್ರಶಸ್ತಿ

ಬಿ) ಅಬೆಲ್ ಪ್ರಶಸ್ತಿ

ಸಿ) ಇಂಟರ್ ನ್ಯಾಷನಲ್ ಬೂಕರ್ ಪ್ರಶಸ್ತಿ

ಡಿ) ಪುಲಿಟ್ಜರ್ ಪ್ರಶಸ್ತಿ

ಉತ್ತರ: ಬಿ) ಅಬೆಲ್ ಪ್ರಶಸ್ತಿ

ಅಬೆಲ್ ಪ್ರಶಸ್ತಿ ಬಗ್ಗೆ ಮಾಹಿತಿ

- ಅಬೆಲ್ ಪ್ರಶಸ್ತಿಯನ್ನು ಮೊದಲು ನೀಡಿದ್ದು – 2003
- ಅಬೆಲ್ ಪ್ರಶಸ್ತಿಯ ವಿಶೇಷತೆ – ಗಣಿತ ಶಾಸ್ತ್ರದ ನೊಬೆಲ್
- ಅಬೆಲ್ ಪ್ರಶಸ್ತಿಯನ್ನು ಮೊದಲು ಪಡೆದವರು – ಜೀನ್–ಪಿಯರ್ ಸೆರ್ರೆ
- ಅಬೆಲ್ ಪ್ರಶಸ್ತಿ ನೀಡುವ ದೇಶ – ನಾರ್ವೆ
- ಅಬೆಲ್ ಪ್ರಶಸ್ತಿ ಪಡೆದ ಮೂಲತಃ ಭಾರತದವರು – ಎಸ್.ಆರ್ ಶ್ರೀನಿವಾಸ್ ವರದನ್ – 2007
- 2023ರ ಅಬೆಲ್ ಪ್ರಶಸ್ತಿ ಪಡೆದವರು – ಲೂಯಿಸ್ ಕ್ಯಾಫರೆಲ್ಲಿ (ಅರ್ಜೆಂಟೀನಾ ದೇಶದವರು)
- 2024ರ ಅಬೆಲ್ ಪ್ರಶಸ್ತಿ ಪಡೆದವರು – ಮೈಕಲ್ ತಲಗ್ರಾಂಡ್ (ಫ್ರೆಂಚ್ ಗಣಿತ ತಜ್ಞ)

49. ಜೌಗು ಪ್ರದೇಶ (Wetlands) ಸಂರಕ್ಷಣೆಗೆ ಸಂಬಂಧಿಸಿದಂತೆ ರಾಮ್ಸರ್ ಎಂಬಲ್ಲಿ 1971 ಫೆಬ್ರುವರಿ 2ರಂದು ಒಂದು ಒಪ್ಪಂದ ಏರ್ಪಟ್ಟಿತು, ರಾಮ್ಸರ್ ಎಂಬ ಪ್ರದೇಶ ಎಲ್ಲಿದೆ ?

ಎ) ಇರಾಕ್

ಬಿ) ಇರಾನ್

ಸಿ) ಸೌದಿ ಅರೇಬಿಯಾ

ಡಿ) ಸಿರಿಯಾ

ಉತ್ತರ: ಬಿ) ಇರಾನ್

ವಿಶ್ವ ಜೌಗು ದಿನ – ಫೆಬ್ರುವರಿ 2

2024 ಫೆಬ್ರುವರಿ 2ರ ವಿಶ್ವ ಜೌಗು ದಿನದ ಥೀಮ್ – Wetlands and human wellbeing

2024 ಫೆಬ್ರುವರಿ 2ರಂದು ವಿಶ್ವ ಜೌಗು ದಿನ ಕಾರ್ಯಕ್ರಮವವನ್ನು ಭಾರತದ ಮಧ್ಯಪ್ರದೇಶ ರಾಜ್ಯದ ಇಂದೋರ್‌ನಲ್ಲಿರುವ ಸಿರ್‌ಪುರ್ ಸರೋವರದ ಬಳಿ ಹಮ್ಮಿಕೊಳ್ಳಲಾಗಿತ್ತು ಭಾರತದಲ್ಲಿ ಒಟ್ಟು 85 ರಾಮ್ಸರ್ ತಾಣಗಳಿವೆ. ಇದರಲ್ಲಿ ಕರ್ನಾಟಕದ ಮಂಡ್ಯ ಜಿಲ್ಲೆಯ ರಂಗನತಿಟ್ಟು ಪಕ್ಷಿಧಾಮ, ವಿಜಯನಗರ ಜಿಲ್ಲೆಯ ಅಂಕ ಸಮುದ್ರ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ, ಉತ್ತರಕನ್ನಡ ಜಿಲ್ಲೆಯ ಅಘನಾಶಿನಿ ನದಿ ಮುಖಜ ಪ್ರದೇಶ (ಅಳಿವೆ), ಗದಗ ಜಿಲ್ಲೆಯ ಮಾಗಡಿ ಕೆರೆ ಸಂರಕ್ಷಣಾ ಮೀಸಲು ಪ್ರದೇಶ ಎಂಬ ತಾಣಗಳಿವೆ.

50. 2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿಯಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದವರು ಯಾರು ?

ಎ) ಹಾಯ್ಟೆ ವಾನ್ ಹಾಯ್ಟೆಮಾ

ಬಿ) ಕ್ರಿಸ್ಟೋಫರ್ ನೋಲನ್

ಸಿ) ಸಿಲಿಯನ್ ಮರ್ಫಿ

ಡಿ) ಲುಡ್ವಿನ್ ಗೊರಾನ್ಸನ್

ಉತ್ತರ: ಸಿ) ಸಿಲಿಯನ್ ಮರ್ಫಿ

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

ವಿವರಣೆ –

2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿ –

- ಅತ್ಯುತ್ತಮ ಚಲನಚಿತ್ರ – ಓಪನ್ ಹೈಮರ್
- ಅತ್ಯುತ್ತಮ ನಟ ಸಿಲಿಯನ್ ಮರ್ಫಿ
- ಅತ್ಯುತ್ತಮ ನಟಿ ಎಮ್ಮಾ ಸ್ಟೋನ್
- ಅತ್ಯುತ್ತಮ ನಿರ್ದೇಶಕ – ಕ್ರಿಸ್ಟೋಫರ್ ನೋಲನ್
- 2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿಯಲ್ಲಿ ಅತ್ಯುತ್ತಮ ಚಲನಚಿತ್ರ ಓಪನ್ ಹೈಮರ್ ಒಟ್ಟು 7 ವಿಭಾಗಗಳಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದೆ.

51. 2023–24ರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ ?

ಎ) 125 ಬಿ) 130 ಸಿ) 132 ಡಿ) 134

ಉತ್ತರ: ಡಿ) 134

ವಿವರಣೆ –

2023–24ರ ಮಾನವ ಅಭಿವೃದ್ಧಿ ವರದಿಯನ್ನು ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಸಂಸ್ಥೆಯು 2024 ಮಾರ್ಚ್ 13ರಂದು ಬಿಡುಗಡೆ ಮಾಡಿತು. ಈ ವರದಿಯಲ್ಲಿ ಭಾರತ ಒಟ್ಟು 193 ರಾಷ್ಟ್ರಗಳ ಪಟ್ಟಿಯಲ್ಲಿ 0.644 ಅಂಕಗಳೊಂದಿಗೆ 134ನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ಸ್ವಿಟ್ಜರ್‌ಲ್ಯಾಂಡ್ ದೇಶ 2ನೇ ಸ್ಥಾನದಲ್ಲಿ ನಾರ್ವೆ ದೇಶ 3ನೇ ಸ್ಥಾನದಲ್ಲಿ ಐಸ್‌ಲ್ಯಾಂಡ್ ದೇಶವಿದೆ. ಕೊನೆಯ ಸ್ಥಾನದಲ್ಲಿ ಸೊಮಾಲಿಯ ದೇಶವಿದೆ.

52. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಸ್ಪೇನ್ ದೇಶದ ಪ್ರಧಾನ ಮಂತ್ರಿ	I. ನರೇಂದ್ರ ಮೋದಿ
ಬಿ) ಭಾರತದ ಪ್ರಧಾನ ಮಂತ್ರಿ	II. ಶಿಗೇರು ಇಶಿಬಾ
ಸಿ) ಜಪಾನ್‌ನ ಪ್ರಧಾನ ಮಂತ್ರಿ	III. ಪೆದ್ರೊ ಸ್ಯಾಂಚೆಸ್
ಡಿ) ಆಸ್ಟ್ರೇಲಿಯಾದ ಪ್ರಧಾನ ಮಂತ್ರಿ	IV. ಆಂಥೋನಿ ಅಲ್ಬನೀಸ್

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (I) (II) (III)
ಡಿ) (III) (I) (II) (IV)

ಉತ್ತರ: ಡಿ) (III) (I) (II) (IV)

53. ಕ್ವಾಡ್ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ಕ್ವಾಡ್ ದೇಶಗಳು – ಆಸ್ಟ್ರೇಲಿಯಾ, ಇಂಡಿಯಾ, ಜಪಾನ್, ಅಮೆರಿಕ

ಬಿ) 2024 ಸೆಪ್ಟೆಂಬರ್ 21ರಂದು ಕ್ವಾಡ್ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆ ಅಮೆರಿಕ ದೇಶದ ಡೆಲವೇರ್‌ನ ವಿಲ್ಮಿಂಗ್ಟನ್‌ನಲ್ಲಿ ನಡೆಯಿತು.

ಸಿ) ಗರ್ಭಕಂಠ ಕ್ಯಾನ್ಸರ್ ವಿರುದ್ಧ ಹೋರಾಡುವುದಕ್ಕಾಗಿ 2024ರ ಕ್ವಾಡ್ ಶೃಂಗಸಭೆಯಲ್ಲಿ ಘೋಷಿಸಿದ 'ಕ್ವಾಡ್ ಕ್ಯಾನ್ಸರ್ ಮೂನ್‌ಶೂಟ್' ಕಾರ್ಯಕ್ರಮಕ್ಕೆ ₹ 62 ಕೋಟಿ (7.5 ಮಿಲಿಯನ್ ಡಾಲರ್) ದೇಣಿಗೆ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿರವರು ಘೋಷಿಸಿದ್ದಾರೆ.

ಡಿ) 2024 ಸೆಪ್ಟೆಂಬರ್ 21ರಂದು ಕ್ವಾಡ್ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆಯಲ್ಲಿ ಇಂಡೋ–ಪೆಸಿಫಿಕ್ ವಲಯದಲ್ಲಿ ಶಾಂತಿ ಸುಭದ್ರತೆ, ಸುಸ್ಥಿರ ಅಭಿವೃದ್ಧಿ, ಆರೋಗ್ಯ ಸಹಕಾರ, ನವೀನ ತಂತ್ರಜ್ಞಾನ ಅಭಿವೃದ್ಧಿ ,ಕ್ವಾಡ್ ರಾಷ್ಟ್ರಗಳಲ್ಲಿ ಕ್ಯಾನ್ಸರ್ ನಿವಾರಣೆ ಹಾಗೂ ರೋಗ ತಡೆಗಟ್ಟಲು ಅಗತ್ಯ ಕ್ರಮ ವಹಿಸುವುದು, ಉಕ್ರೇನ್–ರಷ್ಯಾ ಸಂಘರ್ಷ ಇಸ್ರೇಲ್–ಹಮಾಸ್ ಸಮರದಿಂದ ಜಾಗತಿಕವಾಗಿ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಕ್ವಾಡ್ ನಾಯಕರು ಸಮಗ್ರವಾಗಿ ಚರ್ಚೆ ನಡೆಸಿದರು.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

54. 2024ನೇ ಸಾಲಿನ ಶರೀರ ವಿಜ್ಞಾನ/ ವೈದ್ಯಕೀಯ ವಿಭಾಗ (Medicine) ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ಕ್ಯಾನ್ಸರ್‌ಗೆ ಹೊಸ ವಿಧಾನದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗಬಲ್ಲ ಮೈಕ್ರೋ ಆರ್‌ಎನ್‌ಎ ಆವಿಷ್ಕಾರಕ್ಕಾಗಿ ಅಮೆರಿಕದ ವಿಕ್ಟರ್ ಆ್ಯಂಬ್ರೋಸ್ ಮತ್ತು ಗ್ಯಾರಿ ರುವ್‌ಕುನ್‌ರವರಿಗೆ 2024ನೇ ಸಾಲಿನ ಶರೀರ ವಿಜ್ಞಾನ ಅಥವಾ ವೈದ್ಯಕೀಯ ಕ್ಷೇತ್ರದ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ.

ಬಿ) ಇವರಿಬ್ಬರ ಹೊಸ ಆವಿಷ್ಕಾರವು ಜೀನ್‌ಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಂಪೂರ್ಣ ಹೊಸ ಸಿದ್ಧಾಂತವನ್ನು ಜಗತ್ತಿನ ಮುಂದಿಟ್ಟಿದೆ ಎಂದು ನೊಬೆಲ್ ಆಯ್ಕೆ ಸಮಿತಿಯು ತಿಳಿಸಿತು.

ಸಿ) ಯೂನಿವರ್ಸಿಟಿ ಆಫ್ ಮೆಸಾಚ್ಯುಸೆಟ್ಸ್ ಮೆಡಿಕಲ್ ಸ್ಕೂಲ್‌ನಲ್ಲಿ ಪ್ರಾಧ್ಯಾಪಕರಾಗಿರುವ ವಿಕ್ಟರ್ ಆ್ಯಂಬ್ರೋಸ್‌ಅವರು ಹಾರ್ವರ್ಡ್ ವಿವಿಯಲ್ಲಿ ನಡೆಸಿದ ಸಂಶೋಧನೆಗೆ ಈ ಪ್ರಶಸ್ತಿ ಸಂದಿದೆ. ಗ್ಯಾರಿ ರುವ್‌ಕುನ್ ಅವರು ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನಲ್ಲಿ ಪ್ರಾಧ್ಯಾಪಕರು. ಮೆಸಾಚ್ಯುಸೆಟ್ಸ್ ಜನರಲ್ ಹಾಸ್ಪಿಟಲ್ ಮತ್ತು ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನಲ್ಲಿ ಸಂಶೋಧನೆ ನಡೆಸಿದ್ದರು.

ಡಿ) ಮೈಕ್ರೋ ಆರ್‌ಎನ್‌ಎ ಎಂದರೆ – ಮೈಕ್ರೋ ಆರ್‌ಎನ್‌ಎಗಳು ಅತ್ಯಂತ ಸಣ್ಣ ಕಣಗಳಾಗಿದ್ದು, ಜೀನ್ (ವಂಶವಾಹಿ)ಗಳ ಕಣಗಳ ಮಟ್ಟದಲ್ಲಿ ಯಾವ ಸಂದರ್ಭದಲ್ಲಿ ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದನ್ನು ನಿಯಂತ್ರಿಸುತ್ತವೆ. ಹೀಗಾಗಿಯೇ ದೇಹದ ಎಲ್ಲಾ ಭಾಗಗಳಲ್ಲಿ ಒಂದೇ ರೀತಿಯ ಜೀನ್‌ಗಳು, ಜೀವಕೋಶಗಳು ಇದ್ದರೂ ಅವುಗಳ ಕಾರ್ಯನಿರ್ವಹಣೆ ಮಾತ್ರ ಬೇರೆ ಬೇರೆ ಇಂಥ ಮೇಕ್ರೋ ಆರ್‌ಎನ್‌ಎಗಳನ್ನು ಅಮೆರಿಕ ದೇಶದವರಾದ ವಿಕ್ಟರ್ ಆ್ಯಂಬ್ರೋಸ್ ಮತ್ತು ಗ್ಯಾರಿ ರುವ್‌ಕುನ್ ಸಂಶೋಧಿಸಿದ್ದರು.

ಈ ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

55. ಭೌತವಿಜ್ಞಾನ ಕ್ಷೇತ್ರದ ನೊಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಮೆಷಿನ್ ಲರ್ನಿಂಗ್ ಮತ್ತು ಕೃತಕ ನ್ಯೂರಲ್ ನೆಟ್‌ವರ್ಕ್‌ಗೆ ಸಂಬಂಧಿಸಿದ ಸಂಶೋಧನೆ ಹಾಗೂ ಆವಿಷ್ಕಾರಗಳಿಗಾಗಿ ಅಮೆರಿಕ ದೇಶದ ಜಾನ್ ಜೆ. ಹಾಪ್ ಫೀಲ್ಡ್ ಮತ್ತು ಕೆನಡಾ ದೇಶದ ಜೆಫ್ರಿ ಇ. ಹಿಂಟನ್‌ರವರಿಗೆ 2024ನೇ ಸಾಲಿನ ಭೌತವಿಜ್ಞಾನ ಕ್ಷೇತ್ರದ (Physics) ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ.

2) ಎಲೆಕ್ಟ್ರಾನ್‌ಗಳ ಚಲನೆ ಮತ್ತು ವರ್ತನೆ ಕುರಿತು ಹೊಸ ಒಳನೋಟ ಒದಗಿಸುವ ಸಂಶೋಧನೆಗಾಗಿ ಅಮೆರಿಕ ದೇಶದ ಪಿಯರಿ ಅಗೋಸ್ಟಿನಿ , ಜರ್ಮನಿ ದೇಶದ ಫೆರೆಂಕ್ ಕ್ರೌಜ್ ಮತ್ತು ಸ್ವೀಡನ್ ದೇಶದ ಆನ್ನೆ ಎಲ್ ಹುಲ್ಲಿಯರ್‌ರವರಿಗೆ 2023ನೇ ಸಾಲಿನ ಭೌತವಿಜ್ಞಾನ ಕ್ಷೇತ್ರದ (Physics) ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿದೆ.

3) ನೊಬೆಲ್ ಪ್ರಶಸ್ತಿಯನ್ನು ಒಟ್ಟು 6 ಕ್ಷೇತ್ರಗಳಿಗೆ ನೀಡಲಾಗುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 1 ಮತ್ತು 2 ಸರಿಯಾಗಿವೆ.
ಸಿ) 1 ಮತ್ತು 3 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

56. ನೊಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ಅಮೆರಿಕದ ಡೇವಿಡ್ ಬೇಕರ್ ಮತ್ತು ಬ್ರಿಟನ್ನಿನ ಜಾನ್ ಜಂಪರ್ ಹಾಗೂ ಡೆಮಿಸ್ ಹಸ್ಸಾಬಿಸ್ ಅವರಿಗೆ 2024ನೇ ಸಾಲಿನ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬಿ) ಅಮೆರಿಕದ ಡೇವಿಡ್ ಬೇಕರ್ ಮತ್ತು ಬ್ರಿಟನ್ನಿನ ಜಾನ್ ಜಂಪರ್ ಹಾಗೂ ಡೆಮಿಸ್ ಹಸ್ಸಾಬಿಸ್‌ರವರು ಕಂಪ್ಯೂಟಿಂಗ್ ಹಾಗೂ ಕೃತಕ ಬುದ್ಧಿಮತ್ತೆಯ (ಎ.ಐ) ನೆರವಿನಿಂದ ಪ್ರೊಟೀನ್‌ಗಳ ರಹಸ್ಯವನ್ನು ತಿಳಿಸಿದ ಕಾರಣಕ್ಕೆ ಇವರನ್ನು ಈ ಅತ್ಯುನ್ನತ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಸಿ) ಕ್ವಾಂಟಮ್ ಡಾಟ್‌ಗಳ ಅನ್ವೇಷಣೆ ಮತ್ತು ಸಂಶ್ಲೇಷಣೆಗಾಗಿ ಅಮೆರಿಕದ ಮೌಂಗಿ ಜಿ.ಬವೆಂಡಿ, ಲೂಯಿಸ್ ಇ. ಬ್ರಸ್, ಅಲೆಕ್ಸಿ ಐ. ಎಕಿಮೊವ್‌ರವರಿಗೆ 2023ನೇ ಸಾಲಿನ ರಸಾಯನಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿ ನೀಡಲಾಗಿದೆ.

ಡಿ) ಮೇರಿ ಕ್ಯೂರಿರವರು ಭೌತಶಾಸ್ತ್ರ(1903) ಮತ್ತು ರಸಾಯನ ಶಾಸ್ತ್ರ (1911) ಎರಡೂ ವಿಭಾಗಗಳಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಏಕೈಕ ಮತ್ತು ಮೊದಲ ಮಹಿಳೆ

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

57. ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ

ಎ) ದಕ್ಷಿಣ ಕೊರಿಯಾದ ಲೇಖಕಿ ಹ್ಯಾನ್ ಕಾಂಗ್ ಅವರಿಗೆ 2024ನೇ ಸಾಲಿನ ಸಾಹಿತ್ಯ ವಿಭಾಗದ ನೊಬೆಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬಿ) ಹ್ಯಾನ್ ಕಾಂಗ್‌ರವರು ಮಾನವ ಜೀವನದ ದುರ್ಬಲತೆಯನ್ನು ಬಹಿರಂಗಪಡಿಸುವ ಇವರ ಕಾವ್ಯಾತ್ಮಕ ಗದ್ಯಕ್ಕೆ ಈ ಪ್ರಶಸ್ತಿ ದೊರಕಿದೆ. ಸಾಹಿತ್ಯ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದ ಮೊದಲ ಏಷ್ಯಾದ ಮಹಿಳೆ ಮತ್ತು ಮೊದಲ ದಕ್ಷಿಣ ಕೊರಿಯಾದ ಬರಹಗಾರರು. 2000ರಲ್ಲಿ ದಕ್ಷಿಣ ಕೊರಿಯಾದ ಮಾಜಿ ಅಧ್ಯಕ್ಷ ಕಿಮ್ ಡೇ– ಜಂಗ್ ಶಾಂತಿ ವಿಭಾಗದ ನೊಬೆಲ್ ಪ್ರಶಸ್ತಿ ಪಡೆದಿದ್ದರು

ಸಿ) ಲೇಖಕಿ ಹ್ಯಾನ್ ಕಾಂಗ್ ಅವರಿಗೆ 2016ರಲ್ಲಿ ದಿ ವೆಜಿಟೇರಿಯನ್ ಕೃತಿಗಾಗಿ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ದೊರಕಿದೆ. ಮಾಂಸಾಹಾರ ತ್ಯಜಿಸುವ ನಿರ್ಧಾರ ಕೈಗೊಂಡ ಮಹಿಳೆಯೊಬ್ಬಳು ಎದುರಿಸುವ ವಿನಾಶಕಾರಿ ಪರಿಣಾಮಗಳು ಈ ಕಾದಂಬರಿಯ ಕಥಾವಸ್ತುವಾಗಿದೆ.

ಡಿ) ಹೊಸ ನಮೂನೆಯ ನಾಟಕಗಳು ಮತ್ತು ಧ್ವನಿ ಇಲ್ಲದವರಿಗೆ ಧ್ವನಿಯಾದ ಗದ್ಯ ರಚನೆಗಾಗಿ ನಾರ್ವೆ ದೇಶದ ಜಾನ್ ಫೋಸ್ (ಎಂಟಿ ಈಥಜ) ರವರಿಗೆ 2023ನೇ ಸಾಲಿನ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ನೀಡಲಾಗಿದೆ.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

58. ಶಾಂತಿ ವಿಭಾಗದ ನೊಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ

1) ಜಪಾನ್ ದೇಶದ ಅಣ್ವಸ್ತ್ರ ಬಳಕೆ ವಿರುದ್ಧ ಹೋರಾಟದ ಸಂಘಟನೆಯಾದ ನಿಹೋನ್ ಹಿಡನ್‌ಕ್ಯೋ ಎಂಬ ಸಂಘಟನೆಯನ್ನು 2024ನೇ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಅಣ್ವಸ್ತ್ರಗಳನ್ನು ಯಾಕೆ ಬಳಸಬಾರದು ಎನ್ನುವುದನ್ನು ಮನವರಿಕೆ ಮಾಡಲು ಈ ಸಂಘಟನೆ ಶ್ರಮಿಸುತ್ತಿದೆ.

2) ಇರಾನ್‌ನಲ್ಲಿ ಮಹಿಳೆಯರ ಮೇಲಿನ ದಬ್ಬಾಳಿಕೆ ವಿರುದ್ಧ ಹೋರಾಡಿದ್ದಕ್ಕಾಗಿ 2023ನೇ ಸಾಲಿನ ಶಾಂತಿ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಇರಾನ್ ದೇಶದ ನರ್ಗೀಸ್ ಮೊಹಮ್ಮದಿರವರಿಗೆ ನೀಡಲಾಗಿದೆ.

3) ನೊಬೆಲ್ ಶಾಂತಿ ಪ್ರಶಸ್ತಿಯನ್ನು ನಾರ್ವೆ ದೇಶದ ಓಸ್ಲೋ ನಗರದಲ್ಲಿ ಪ್ರಧಾನ ಮಾಡಲಾಗುತ್ತದೆ.

ಮೇಲ್ಕಂಡ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿಯಾಗಿವೆ.

ಎ) 1 ಮಾತ್ರ ಸರಿಯಾಗಿದೆ.

ಬಿ) 1 ಮತ್ತು 2 ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

59. ಅರ್ಥಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ–

1) ಅಮೆರಿಕದ ಡೆರಾನ್ ಆಶಿಮೊಗ್ಲೊ, ಸೈಮನ್ ಜಾನ್ಸನ್ ಮತ್ತು ಜೆಮ್ಸ್ ಎ ರಾಬಿನ್ಸನ್‌ರವರಿಗೆ 2024ನೇ ಸಾಲಿನ ಅರ್ಥಶಾಸ್ತ್ರ ವಿಭಾಗದ ನೊಬಲ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇವರು ಕೆಲವು ದೇಶಗಳು ಶ್ರೀಮಂತವಾಗಿಯೇ ಇರುವುದು ಮತ್ತು ಕೆಲವು ದೇಶಗಳು ಬಡವಾಗಿಯೇ ಉಳಿಯುತ್ತಿರುವ ಕುರಿತು ಸಂಶೋಧನೆ ಮಾಡಿದ್ದಾರೆ.

2) ಮಹಿಳಾ ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರ ಉತ್ಪಾದನೆಗಳ ಮಾರುಕಟ್ಟೆ ಬಗೆಗೆ ಮಾಡಿರುವ ವ್ಯಾಪಕ ಸಂಶೋಧನೆಗಾಗಿ 2023ನೇ ಸಾಲಿನ ಅರ್ಥಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಅಮೆರಿಕದ ಕ್ಲಾಡಿಯ/ಕ್ಲೌಡಿಯಾ ಗೋಲ್ಡಿನ್ ರವರಿಗೆ ನೀಡಲಾಗಿದೆ.

3) 1998ರಲ್ಲಿ ಅರ್ಥಶಾಸ್ತ್ರ ವಿಭಾಗದ ನೊಬೆಲ್ ಪ್ರಶಸ್ತಿಯನ್ನು ಭಾರತದ ಅರ್ಥಶಾಸ್ತ್ರಜ್ಞರಾದ ಡಾ॥ ಅಮರ್ತ್ಯಸೇನ್‌ರವರಿಗೆ ನೀಡಲಾಯಿತು.

ಮೇಲ್ಕಂಡ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಸರಿಯಾಗಿವೆ.

ಎ) 1 ಮಾತ್ರ ಸರಿಯಾಗಿದೆ.

ಬಿ) 1 ಮತ್ತು 2 ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

60. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ

ಎ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು 2006 ಫೆಬ್ರುವರಿ 2ರಂದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಭಾರತದ ಅಂದಿನ ಪ್ರಧಾನ ಮಂತ್ರಿ ಡಾ. ಮನಮೋಹನ ಸಿಂಗ್‌ರವರು ಉದ್ಘಾಟಿಸಿದರು

ಬಿ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು 2006 ಫೆಬ್ರುವರಿ 2ರಂದು ಭಾರತದ 200 ಜಲ್ಲೆಗಳಲ್ಲಿ ಮೊದಲ ಹಂತದಲ್ಲಿ ಚಾಲನೆಗೊಳಿಸಲಾಯಿತು.

ಸಿ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕರ್ನಾಟಕದಲ್ಲಿ 2006 ಫೆಬ್ರುವರಿ 2ರಂದು ರಾಯಚೂರು, ಬೀದರ್, ಚಿತ್ರದುರ್ಗ, ಕಲ್ಬುರ್ಗಿ, ದಾವಣಗೆರೆ ಜಿಲ್ಲೆಗಳಲ್ಲಿ ಜಾರಿಗೊಳಿಸಲಾಯಿತು.

ಡಿ) 2009 ಅಕ್ಟೋಬರ್ 2ರಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂದು ನಾಮಕರಣ ಮಾಡಲಾಯಿತು.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

61. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಭಾರತದಲ್ಲಿ ಸಿನಿಮಾ ಕ್ಷೇತ್ರಕ್ಕೆ ನೀಡುವ ಅತಿ ದೊಡ್ಡ ಪ್ರಶಸ್ತಿಯಾಗಿದೆ.

2) ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಡೈರಕ್ಟೊರೇಟ್ ಆಫ್ ಫಿಲ್ಮ್ ಫೆಸ್ಟಿವಲ್ಸ್(ಚಲನಚಿತ್ರೋತ್ಸವಗಳ ನಿರ್ದೇಶನಾಲಯ)ರವರು ಪ್ರಧಾನ ಮಾಡುತ್ತಾರೆ.

3) ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯು 10 ಲಕ್ಷ ರೂಪಾಯಿ ಮತ್ತು ಸ್ವರ್ಣ ಕಮಲಗಳನ್ನು ಒಳಗೊಂಡಿರುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

62. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ ಸರಿಯಾಗಿದೆ.

ಎ) ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಮೊದಲ ಬಾರಿಗೆ ದೇವಿಕಾ ರಾಣಿರವರಿಗೆ 17ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನ ಮಾಡಲಾಯಿತು

ಬಿ) ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಮೊದಲ ಬಾರಿಗೆ ಪಡೆದ ಕನ್ನಡದ ನಟರು – ಡಾ॥ ರಾಜಕುಮಾರ್ (1995 ರಲ್ಲಿ) (43ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು)

ಸಿ) ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಪಡೆದ ಮೊದಲ ಛಾಯಾಗ್ರಾಹಕರು – ವಿ. ಕೆ. ಮೂರ್ತಿ (ಕನ್ನಡಿಗ 2008 ರಲ್ಲಿ) (56ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು)

ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

ಉತ್ತರ : ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

63. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2021ನೇ ಸಾಲಿನ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದವರು – ವಹಿದಾ ರೆಹಮಾನ್ (2023ರಲ್ಲಿ ನಡೆದ 69ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ)

2) 2022ನೇ ಸಾಲಿನ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಆಯ್ಕೆಯಾದವರು – ಬಾಲಿವುಡ್‌ನ ಹಿರಿಯ ನಟ ಮಿಥುನ್ ಚಕ್ರವರ್ತಿ (2024 ಅಕ್ಟೋಬರ್ 8ರಂದು ನಡೆದ 70ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ.)

3) ಮಿಥುನ್ ಚಕ್ರವರ್ತಿರವರು "ಮೃಗಯಾ", "ಡಿಸ್ಕೊ ಡಾನ್ಸರ್" ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಇವರಿಗೆ 2024ರಲ್ಲಿ ಭಾರತದ ಮೂರನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮಭೂಷಣ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ. ಮಿಥುನ್ ಚಕ್ರವರ್ತಿರವರು 4 ದಶಕಗಳ ವೃತ್ತಿ ಜೀವನದಲ್ಲಿ ಕನ್ನಡ, ಬಂಗಾಳಿ, ಹಿಂದಿ, ತೆಲುಗು, ಭೋಜ್‌ಪುರಿ, ಪಂಜಾಬಿ, ಒಡಿಯಾ, ತಮಿಳು ಭಾಷೆಯ ಚಿತ್ರಗಳಲ್ಲಿ ನಟಿಸಿದ್ದಾರೆ. 2017ರಲ್ಲಿ ಕನ್ನಡದ "ದ ವಿಲನ್" ಚಿತ್ರದಲ್ಲಿ ನಟಿಸಿದ್ದಾರೆ.ಮಿಥುನ್ ಚಕ್ರವರ್ತಿಯವರು ಪಶ್ಚಿಮ ಬಂಗಾಳ ರಾಜ್ಯದವರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

64. ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನು ಫಿಲಿಫೈನ್ಸ್ ದೇಶ ನೀಡುತ್ತದೆ ಮತ್ತು ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನು ಏಷ್ಯಾದ ನೊಬೆಲ್ ಪ್ರಶಸ್ತಿ ಎನ್ನುವರು.

ಬಿ) ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನು ಮೊದಲು ಪಡೆದ ಭಾರತೀಯರು – ವಿನೊಬಾ ಬಾವೆ (1958) (ಸಮುದಾಯ ನಾಯಕತ್ವ)

ಸಿ) 2024ರಲ್ಲಿ ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನು ಜಪಾನ್ ದೇಶದ ಮಿಯಾಜಾಕಿ ಹಯಾವೊ, ಇಂಡೋನೇಷ್ಯಾ ದೇಶದ ಫರ್ಮಿಜಾ ಫರ್ಹಾನ್, ಭೂತಾನ್ ದೇಶದ ಕರ್ಮ ಫುಂಟ್ಶೋ, ವಿಯೆಟ್ನಾಂ ದೇಶದ ಡಾ. ನ್ಗುಯೆನ್ ಥಿ ಎನ್ಗೊಕ್ ಫುವಾಂಗ್ ಮತ್ತು ಥೈಲ್ಯಾಂಡ್ ದೇಶದ ಗ್ರಾಮೀಣ ವೈದ್ಯರ ಆಂದೋಲನ ಆಯ್ಕೆ ಮಾಡಲಾಗಿದೆ.

ಡಿ) ಟಿಬೆಟ್‌ನ 14ನೇ ಧರ್ಮಗುರು ದಲೈಲಾಮಾರವರಿಗೆ 1959ರಲ್ಲಿ ರಾಮೋನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ಘೋಷಣೆ ಮಾಡಲಾಗಿತ್ತು ಆದರೆ ಈ ಪ್ರಶಸ್ತಿಯನ್ನು 2023 ಏಪ್ರೀಲ್ 26ರಂದು ಪ್ರಧಾನ ಮಾಡಲಾಗಿದೆ.

ಮೆಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

65. International Big Cat Alliance ಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) 2024 ಏಪ್ರಿಲ್ 9 ರಂದು Project Tiger 50 ವರ್ಷ ಪೂರೈಸಿದ ನೆನಪಿಗಾಗಿ ಚಾಮರಾಜನಗರ ಜಿಲ್ಲೆಯಲ್ಲಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಭೇಟಿ ನೀಡಿ ಹುಲಿಗಳ ಗಣತಿ ದತ್ತಾಂಶವನ್ನು ಬಿಡುಗಡೆ ಮಾಡುವುದರ ಜೊತೆಗೆ International Big Cat Alliance ಅನ್ನು ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಘೋಷಿಸಿದರು.

ಬಿ) International Big Cat Alliance ಗೆ 2023–24 ರಿಂದ 2027–28 ರವರೆಗಿನ 5 ವರ್ಷಗಳ ಅವಧಿಗೆ 150 ಕೋಟಿ ರೂಪಾಯಿಗಳ ಒಂದು ಬಾರಿ ಹಣಕಾಸಿನ ಬೆಂಬಲವನ್ನು ನೀಡಲು ನಿರ್ಧರಿಸಲಾಗಿದೆ.

ಸಿ) International Big Cat Alliance ಪ್ರಮುಖ 7 Big Cats ಗಳನ್ನು ಸಂರಕ್ಷಿಸುವ ಉದ್ದೇಶವನ್ನು ಹೊಂದಿದೆ. ಅವುಗಳು ಹುಲಿ, ಸಿಂಹ, ಚಿರತೆ, ಹಿಮ ಚಿರತೆ, ಚೀತಾ, ಪೂಮಾ, ಮತ್ತು ಜಾಗ್ವಾರ್.

ಡಿ) 2022 ಪ್ರಕಾರ ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ಭಾರತದ ರಾಜ್ಯಗಳು ಕ್ರಮವಾಗಿ– 1 ಮಧ್ಯಪ್ರದೇಶ – 785 ಹುಲಿಗಳು, 2 ಕರ್ನಾಟಕ – 563 ಹುಲಿಗಳು, 3 ಉತ್ತರಾಖಂಡ್ – 560 ಹುಲಿಗಳು.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

66. ಶಾಂಘೈ ಸಹಕಾರಿ ಸಂಘಟನೆಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ಶಾಂಘೈ ಸಹಕಾರಿ ಸಂಘಟನೆಯ ಸದಸ್ಯ ದೇಶಗಳು ಭಾರತ, ಕಿರ್ಗಿಸ್ತಾನ್, ಪಾಕಿಸ್ತಾನ್, ರಷ್ಯಾ, ಚೀನಾ, ತಜಕಿಸ್ತಾನ್, ಕಝಾಕಿಸ್ತಾನ್, ಉಜ್ಬೆಕಿಸ್ತಾನ್, ಇರಾನ್ ಮತ್ತು ಬೆಲಾರಸ್ (ಒಟ್ಟು 10 ಸದಸ್ಯ ದೇಶಗಳು)

ಬಿ) ಶಾಂಘೈ ಸಹಕಾರಿ ಸಂಘಟನೆಯ ಸಚಿವಾಲಯದ ಕೇಂದ್ರ ಕಛೇರಿ ಚೀನಾ ದೇಶದ ಬೀಜಿಂಗ್ ನಗರದಲ್ಲಿದೆ.

ಸಿ) ಶಾಂಘೈ ಸಹಕಾರಿ ಸಂಘಟನೆಗೆ 2001ರಲ್ಲಿ ಉಜ್ಬೆಕಿಸ್ತಾನ್ ಸದಸ್ಯ ದೇಶವಾಗಿ, 2017ರಲ್ಲಿ ಭಾರತ ಮತ್ತು ಪಾಕಿಸ್ತಾನ ಸದಸ್ಯ ದೇಶಗಳಾಗಿ, 2023ರಲ್ಲಿ ಇರಾನ್ ಸದಸ್ಯ ದೇಶವಾಗಿ ಮತ್ತು 2024 ಜುಲೈನಲ್ಲಿ ಬೆಲಾರಸ್ ಸದಸ್ಯ ದೇಶವಾಗಿ ಸೇರಿದೆ.

ಡಿ) 2024 ಅಕ್ಟೋಬರ್ 15 ಮತ್ತು 16ರಂದು ಶಾಂಘೈ ಸಹಕಾರಿ ಸಂಘಟನೆಯ ರಾಷ್ಟ್ರಗಳ ಸರ್ಕಾರದ (Head of the Government) ಮುಖ್ಯಸ್ಥರ ಸಮಾವೇಶ ಪಾಕಿಸ್ಥಾನ ದೇಶದ ಇಸ್ಲಾಮಾಬಾದ್‌ನಲ್ಲಿ ನಡೆಯಿತು.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

67. ಬ್ರಿಕ್ಸ್ ಸಂಘಟನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಅಕ್ಟೋಬರ್ 22 ರಿಂದ 24 ರವರೆಗೆ 16ನೇ ಬ್ರಿಕ್ಸ್ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆ ರಷ್ಯಾ ದೇಶದ ಕಜಾನ್‌ನಲ್ಲಿ ನಡೆಯಿತು. ಈ ಶೃಂಗಸಭೆಯಲ್ಲಿ 36 ದೇಶಗಳ ಪ್ರತಿನಿಧಿಗಳು, ನಾಯಕರು ಭಾಗಿಯಾಗಿದ್ದರು.

2) 2023 ಆಗಸ್ಟ್ 22 ರಿಂದ 24ರವರೆಗೆ 15ನೇ ಬ್ರಿಕ್ಸ್ ರಾಷ್ಟ್ರಗಳ ಮುಖ್ಯಸ್ಥರ ಶೃಂಗಸಭೆ ದಕ್ಷಿಣ ಆಫ್ರಿಕಾದ ಜೋಹನ್ಸ್ ಬರ್ಗ್‌ನಲ್ಲಿ ನಡೆಯಿತು.

3) ಪ್ರಸ್ತುತ ಬ್ರಿಕ್ಸ್ ಬ್ಯಾಂಕ್‌ನ ಅಧ್ಯಕ್ಷರು – ದಿಲ್ಮಾ ರೌಸೆಫ್ (ಬ್ರೆಜಿಲ್ ದೇಶದವರು)

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

68. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ಪ್ರತಿ ವರ್ಷ ಸೆಪ್ಟೆಂಬರ್ 27ನ್ನು ವಿಶ್ವ ಪ್ರವಾಸೋದ್ಯಮ ದಿನ ಎಂದು ಆಚರಿಸಲಾಗುತ್ತಿದೆ.

ಬಿ) 2024 ಸೆಪ್ಟೆಂಬರ್ 27ರಂದು ವಿಶ್ವ ಪ್ರವಾಸೋದ್ಯಮ ದಿನವನ್ನು ಜಾರ್ಜಿಯಾ ದೇಶದ ಟಿಬಿಲಿಸಿ ಎಂಬಲ್ಲಿ ವಿಶ್ವ ಪ್ರವಾಸೋದ್ಯಮ ಸಂಸ್ಥೆಯು ಆಚರಿಸಿತು.

ಸಿ) 2024 ಸೆಪ್ಟೆಂಬರ್ 27ರ ವಿಶ್ವ ಪ್ರವಾಸೋದ್ಯಮ ದಿನದ ಧ್ಯೇಯವಾಕ್ಯ – 'ಪ್ರವಾಸೋದ್ಯಮ ಮತ್ತು ಶಾಂತಿ' ("Tourism and Peace")

ಡಿ) 2024ರ ಅತ್ಯುತ್ತಮ ಪ್ರವಾಸೋದ್ಯಮ ಗ್ರಾಮ ಪ್ರಶಸ್ತಿಯಲ್ಲಿ ಸಾಹಸ ಪ್ರವಾಸೋದ್ಯಮ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕುತ್ಲೂರು ಹಳ್ಳಿ ಆಯ್ಕೆಯಾಗಿದೆ.

ಮೆಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

69. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ರಾಷ್ಟ್ರೀಯ ಶಿಕ್ಷಕರ ದಿನ	I. ಸೆಪ್ಟೆಂಬರ್ 8
ಬಿ) ಅಂತಾರಾಷ್ಟ್ರೀಯ ಸಾಕ್ಷರತಾ ದಿನ	II. ಸೆಪ್ಟೆಂಬರ್ 28
ಸಿ) ವಿಶ್ವ ರೇಬಿಸ್ ದಿನ	III. ಸೆಪ್ಟೆಂಬರ್ 5
ಡಿ) ವಿಶ್ವ ಹೃದಯ ದಿನ	IV. ಸೆಪ್ಟೆಂಬರ್ 29

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)

ಬಿ) (II) (I) (IV) (III)

ಸಿ) (IV) (I) (II) (III)

ಡಿ) (III) (I) (II) (IV)

ಉತ್ತರ : ಡಿ) (III) (I) (II) (IV)

70. ಈ ಕೆಳಕಂಡ ಯಾವ ಹೇಳಿಕೆ ಸರಿಯಾಗಿದೆ.

ಎ) ಮಾಂಟ್ರಿಯಲ್ ಪ್ರೋಟೋಕಾಲ್ ಒಪ್ಪಂದ 1987 ಸೆಪ್ಟಂಬರ್ 16ರಂದು ನಡೆಯಿತು. (ಮಾಂಟ್ರಿಯಲ್ ಎನ್ನುವ ನಗರವು ಕೆನಡಾ ದೇಶದಲ್ಲಿದೆ.)

ಬಿ) ಮಾಂಟ್ರಿಯಲ್ ಪ್ರೋಟೋಕಾಲ್ ಓಝೋನ್ ಪದರಿನ ಸಂರಕ್ಷಣೆಗೆ ಸಂಬಂಧಿಸಿದೆ.

ಸಿ) ಓಝೋನ್ ವಲಯ stratosphere ನಲ್ಲಿ ಕಂಡುಬರುತ್ತದೆ.

ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

ಉತ್ತರ : ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

71. ಚೆಸ್ ಒಲಿಂಪಿಯಾಡ್‌ಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) 2024 ಸೆಪ್ಟೆಂಬರ್ 10ರಿಂದ 23ರ ವರೆಗೆ 45ನೇ ಚೆಸ್ ಒಲಿಂಪಿಯಾಡ್ ಹಂಗೇರಿ ದೇಶದ ರಾಜಧಾನಿ ಬುಡಾಪೆಸ್ಟ್‌ನಲ್ಲಿ ನಡೆಯಿತು.

ಬಿ) ಭಾರತ 45ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಓಪನ್ ವಿಭಾಗ ಮತ್ತು ಮಹಿಳೆಯರ ವಿಭಾಗ ಎರಡರಲ್ಲೂ ಮೊದಲ ಬಾರಿಗೆ ಚಿನ್ನದ ಪದಕ ಗೆದ್ದುಕೊಂಡಿತು.

ಸಿ) ಚೆಸ್ ಒಲಿಂಪಿಯಾಡ್‌ನಲ್ಲಿ ಓಪನ್ ವಿಭಾಗದಲ್ಲಿ ವಿಜೇತ ತಂಡಕ್ಕೆ ನೀಡುವ ಪ್ರಶಸ್ತಿ ಹ್ಯಾಮಿಲ್ಟನ್ ರಸೆಲ್‌ಕಪ್ ಮತ್ತು ಮಹಿಳಾ ವಿಭಾಗದಲ್ಲಿ ವಿಜೇತ ತಂಡಕ್ಕೆ ನೀಡುವ ಪ್ರಶಸ್ತಿ ವೆರಾ ಮೆನ್‌ಚಿಕ್ ಕಪ್ ಎರಡೂ ವಿಭಾಗ ಸೇರಿ ನೀಡುವ ಸಮಗ್ರ ಪಶಸ್ತಿ ಗಪ್ರಿಂದಾಶ್ವಿಲಿ ಟ್ರೋಫಿ

ಡಿ) ಭಾರತದ ಪ್ರಸಿದ್ಧ ಚೆಸ್ ಆಟಗಾರರಾದ ವಿಶ್ವನಾಥನ್ ಆನಂದ್, ಡಿ.ಗುಕೇಶ್, ಅರ್ಜುನ್ ಇರಿಗೇಶಿ, ಆರ್.ಪ್ರಜ್ಞಾನಂದ, ಪಿ.ಹರಿಕೃಷ್ಣ, ವಿದಿತ್ ಗುಜರಾತಿ, ದ್ರೋಣವಲ್ಲಿ ಹರಿಕಾ, ದಿವ್ಯಾ ದೇಶ್‌ಮುಖ್, ಆರ್.ವೈಶಾಲಿ, ವಂತಿಕಾ ಅಗರವಾಲ್, ತಾನಿಯಾ ಸಚ್‌ದೇವ್, ಕೊನೆರು ಹಂಪಿ ಮುಂತಾದವರು.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

72. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಎ) ರಾಷ್ಟ್ರೀಯ ಮಹಿಳಾ ಆಯೋಗದ ಹೊಸ ಅಧ್ಯಕ್ಷರಾಗಿ ವಿಜಯಾ ಕಿಶೋರ್ ರಹಾಟ್ಕರ್‌ರವರು ನೇಮಕವಾಗಿದ್ದಾರೆ.ಇವರೊಂದಿಗೆ ಡಾ. ಆರ್ಚನಾ ಮಜುಂದಾರ್‌ರವರು ಸದಸ್ಯರಾಗಿ ನೇಮಕವಾಗಿದ್ದಾರೆ.

ಬಿ) ರಾಷ್ಟ್ರೀಯ ಮಹಿಳಾ ಆಯೋಗ ಸಂಸತ್ತಿನ ನಿಬಂಧನೆಯಿಂದ ರಚನೆಯಾಗಿದ್ದು ಇದೊಂದು ಶಾಸನಬದ್ಧ ಸಂಸ್ಥೆಯಾಗಿದೆ. (ಸಾಂವಿಧಾನಿಕ ಸಂಸ್ಥೆ ಅಲ್ಲ).

ಸಿ) ರಾಷ್ಟ್ರೀಯ ಮಹಿಳಾ ಆಯೋಗವು ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿ ಬರುತ್ತದೆ.

ಡಿ) ರಾಷ್ಟ್ರೀಯ ಮಹಿಳಾ ಆಯೋಗ ಕೇಂದ್ರ ಕಛೇರಿ ನವದೆಹಲಿಯಲ್ಲಿದೆ.

ಮೇಲ್ಕಂಡ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆಗಳು ಸರಿಯಾಗಿವೆ.

1. ಒಂದು ಹೇಳಿಕೆ ಮಾತ್ರ ಸರಿಯಾಗಿದೆ.
2. ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ.
3. ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ.
4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

ಉತ್ತರ : 4. ಎಲ್ಲಾ ಹೇಳಿಕೆಗಳು ಸರಿಯಾಗಿವೆ.

73. ಕಾಳಿದಾಸ ಸಮ್ಮಾನ್ ಪ್ರಶಸ್ತಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 'ಕಾಳಿದಾಸ ಸಮ್ಮಾನ್' ಪ್ರಶಸ್ತಿಯನ್ನು 1980–81 ಮೊದಲ ಬಾರಿಗೆ ಸೆಮ್ಮಂಗುಡಿ ರಾಧಾಕೃಷ್ಣ ಶ್ರೀನಿವಾಸ ಅಯ್ಯರ್ ಮತ್ತು ಪಂಡಿತ್ ಮಲ್ಲಿಕಾರ್ಜುನ್ ಭೀಮರಾಯಪ್ಪ ಮನ್ಸೂರ್‌ರವರಿಗೆ ನೀಡಲಾಗಿದೆ.

2) ಭಾರತೀಯ ಸಂಸ್ಕೃತಿ ಮತ್ತು ಕಲೆಯಲ್ಲಿ ಜೀವಮಾನ ಸಾಧನೆಗಾಗಿ ಮಧ್ಯಪ್ರದೇಶ ಸರ್ಕಾರ ನೀಡುವ 2023ನೇ ಸಾಲಿನ 'ಕಾಳಿದಾಸ ಸಮ್ಮಾನ್' ಪ್ರಶಸ್ತಿಗೆ ಮೈಸೂರಿನ ಚಿತ್ರ ಕಲಾವಿದ ಗಂಜೀಫಾ ರಘುಪತಿ ಭಟ್ಟರು ಆಯ್ಕೆಯಾಗಿದ್ದಾರೆ.

3) 'ಕಾಳಿದಾಸ ಸಮ್ಮಾನ್' ಪ್ರಶಸ್ತಿಯು ₹ 5 ಲಕ್ಷ ನಗದು, ಶಾಲು ಹಾಗೂ ಫಲಕವನ್ನು ಹೊಂದಿದೆ. 2024 ನವೆಂಬರ್ 12ರಂದು ಮಧ್ಯಪ್ರದೇಶ ರಾಜ್ಯದ ಉಜ್ಜಯಿನಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ನೀಡಲಾಗುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

74. ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಅಕ್ಟೋಬರ್ 28 ರಿಂದ ನವೆಂಬರ್ 3 ರವರೆಗೆ ವಿಚಕ್ಷಣಾ ಜಾಗೃತಿ ಸಪ್ತಾಹವನ್ನು ಆಚರಿಸಲಾಯಿತು.

2) ಕೇಂದ್ರ ಜಾಗೃತ ಆಯೋಗವನ್ನು ಕೆ. ಸಂತಾನಂ ಸಮಿತಿಯ ಶಿಫಾರಸ್ಸಿನ ಮೇರೆಗೆ ಸ್ಥಾಪಿಸಲಾಗಿದೆ.

3) ನಿಟ್ಟೂರು ಶ್ರೀನಿವಾಸರಾವ್‌ರವರು ಕೇಂದ್ರ ಜಾಗೃತ ಆಯೋಗದ ಮೊದಲ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

75. ಈ ಕೆಳಕಂಡ ಯಾವ ಹೇಳಿಕೆ ಸರಿಯಾಗಿದೆ.

ಎ) ಕೇಂದ್ರ ಜಾಗೃತ ಆಯೋಗದ ಮುಖ್ಯ ಆಯುಕ್ತರನ್ನು ಮಾನ್ಯ ಪ್ರಧಾನ ಮಂತ್ರಿ, ಕೇಂದ್ರ ಗೃಹ ಸಚಿವರು ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರ ಸಮಿತಿಯ ಶಿಫಾರಸ್ಸಿನ ಮೇರೆಗೆ ಮಾನ್ಯ ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ.

ಬಿ) ಕೇಂದ್ರ ಜಾಗೃತ ಆಯೋಗವು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಸಂಸ್ಥೆಯಾಗಿದೆ.

ಸಿ) ಕೇಂದ್ರ ಜಾಗೃತ ಆಯೋಗವು ತನ್ನ ವರದಿಯನ್ನು ಮಾನ್ಯ ರಾಷ್ಟ್ರಪತಿಯವರಿಗೆ ಸಲ್ಲಿಸುತ್ತದೆ.

ಡಿ) ಮೇಲಿನ ಎಲ್ಲವೂ ಸರಿಯಾಗಿವೆ.

ಉತ್ತರ : ಡಿ) ಮೇಲಿನ ಎಲ್ಲವೂ ಸರಿಯಾಗಿವೆ.



ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

**Please copy the above link and paste it on GOOGLE CHROME for accurate working **

**ಮೇಲಿನ ಲಿಂಕ್ ಅನ್ನು copy ಮಾಡಿ GOOGLE CHROME ನಲ್ಲಿ ಉಪಯೋಗಿಸಿ **

ದ್ರೋಣಾಚಾರ್ಯ ಅಕಾಡೆಮಿಯಲ್ಲಿ ಅನ್‌ಲೈನ್ ಟೆಸ್ಟ್ ಸಿರೀಸ್‌ನಲ್ಲಿ ಭಾಗವಹಿಸಿದಕ್ಕಾಗಿ ಧನ್ಯವಾದಗಳು

ಸಾಧನೆಯ ಹಾದಿಗೊಂದು ಹೊತ್ತಿಗೆ

General Studies

2024 12ನೇ ಪರಿಷ್ಕೃತ ಆವೃತ್ತಿ

NCERT-DSERT ನೂತನ ಪಠ್ಯಕ್ರಮ, APPS/WEB INFORMATION ನ ಪ್ರಚಲಿತ ಮಾಹಿತಿ
KSP, KPSC, KEA, UPSC ಪ್ರಶ್ನೆಪತ್ರಿಕೆಗಳ ಅನ್ವಯ ಪರಿಷ್ಕರಿಸಿ ರಚಿಸಲಾಗಿದೆ

ಭಾರತದಲ್ಲಿರುವ ರಾಜ್ಯಗಳು ವಿಶೇಷವಾಗಿ

ಕರ್ನಾಟಕ

ಪುಸ್ತಕದ ವಿಶೇಷತೆಗಳು

- ಭಾರತದ 28 ರಾಜ್ಯಗಳ ಮಾಹಿತಿ
- ಭಾರತದ 8 ಕೇಂದ್ರಾಡಳಿತ ಪ್ರದೇಶಗಳು
- ಕರ್ನಾಟಕದ 31 ಜಿಲ್ಲೆಗಳ ಮಾಹಿತಿ
- ಸಾಮಾನ್ಯ ಅಧ್ಯಯನದ ವಿಷಯಗಳು
- ಭಾರತದ ಸಂವಿಧಾನ
- ಭಾರತದ ಇತಿಹಾಸ
- ಭಾರತದ ಭೂಗೋಳ
- ಸಾಮಾನ್ಯ ಅರ್ಥಶಾಸ್ತ್ರ
- ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ
- ಕಂಪ್ಯೂಟರ್ ಮತ್ತು ಪೊಲೀಸ್ ಇಲಾಖೆ
- ಯುನೆಸ್ಕೋ ಪಟ್ಟಿ, ರಾಮ್ಸರ್ ತಾಣಗಳು
- ಪ್ರಶಸ್ತಿಗಳು ಮತ್ತು ಕ್ರೀಡಾಕೂಟಗಳು
- ಪ್ರಮುಖ ಮಿಲಿಟರಿ ಸಮರಾಭ್ಯಾಸಗಳು
- ಕರ್ನಾಟಕ ಬಜೆಟ್-2024-25

ಕರ್ನಾಟಕದ ಅತ್ಯುತ್ತಮ GK ಪುಸ್ತಕ

KAS | PDO | VAO | PSI | FDA | SDA | TET | GROUP-C | POLICE

YouTube @HussainappaNayakaAcademy ಹುಸೇನಪ್ಪ ನಾಯಕ

ಹುಸೇನಪ್ಪ ನಾಯಕ • ಪ್ರಚಲಿತ ಘಟನೆಗಳ ಸಮಗ್ರ ಅಧ್ಯಯನ

thanks
FOR WATCHING